ಮುಂಗಾರು

ಸಂಪಾದಕ : ವಡ್ಡರ್ಸೆ ರಘುರಾಮ ಶೆಟ್ಟಿ

A NAME TO REMEMBER....

STRONG ELEGANT AND ECONOMICAL STEEL WARDROBE Afco

Afco Enterprises

K. S. Rao Road, Mangalore Phone: 26652

Branch: Balmatta Road Mangalore Phone: 26037

MUNGARU KRNL 48 ಸಂಪುಟ 1 ಸಂಚಿಕೆ 111 | ಮಂಗಳೂರು, ಶನಿವಾರ ಡಿಸೆಂಬರ್ 29, 1984 | ಬೆಲೆ 60 ಪೈಸೆ ಪುಟ 6

ಅನುಕಂಪದ ಅಲೆ: ರಾಜೀವ್‌ಗೆ ಭದ್ರ ನೆಲೆ

ದೊಡ್ಡ ಬಹುಮತದೆಡೆಗೆ ಕಾಂಗ್ರೆ ಮುನ್ನಡೆ: ಪ್ರಕಟಿತ 229ರಲ್ಲಿ 176 ಬಗಲಿಗೆ

ಶುಕ್ರವಾರ ಮಧ್ಯರಾತ್ರಿಯವರೆಗೆ ಬಂದಿರುವ ದೇಶದ ಎಂಟನೆಯ ಲೋಕಸಭಾ ಚುನಾವಣೆ ಫಲಿತಾಂಶಗಳ ವರದಿ, ಪ್ರಧಾನಿ ರಾಜೀವ್ ಗಾಂಧಿ ನಾಯಕತ್ವದ ಕಾಂಗ್ರೆಸ್(ಐ) ಪಕ್ಷ ದೊಡ್ಡ ಗೆಲುವಿನ ಏಣಿಯನ್ನೇರುತ್ತಿರುವ ಸ್ಪಷ್ಟ ಸೂಚನೆ ನೀಡಿದೆ.

ಕಾಂಗ್ರೆಸ್ (ಐ) ಪಕ್ಷ ಎಲ್ಲ ವೀಕ್ಷಕರ ನಿರೀಕ್ಷೆಯಂತೆ ಉತ್ತರ ಭಾರತದ ಎಲ್ಲ ರಾಜ್ಯಗಳಲ್ಲಿ ಜಯಭೇರಿ ಬಾರಿಸುತ್ತ ಮುನ್ನಡೆದಿದೆಯಾದರೆ ಅದರ ಬಲ "ಅಷ್ಟೇನೂ ಇಲ್ಲ" ವೆಂದು ಎಲ್ಲರೂ ಗ್ರಹಿಸಿರುವ ದಕ್ಷಿಣ ರಾಜ್ಯಗಳಲ್ಲಿಯೂ ಅನಿರೀಕ್ಷಿತ ಗೆಲುವನ್ನು ಗಳಿಸುತ್ತಿದೆ.

ಕರ್ನಾಟಕ ಮತ್ತು ಕೇರಳ ರಾಜ್ಯಗಳಲ್ಲಿ ಕಾಂಗ್ರೆಸ್ (ಐ) ಪಕ್ಷ ಗಮನಾರ್ಹ ಮುನ್ನಡೆ ಸಾಧಿಸಿದೆ. ಕರ್ನಾಟಕದ 28 ಸ್ಥಾನಗಳಲ್ಲಿ ಮೂರು ಅಥವಾ ನಾಲ್ಕು ಸ್ಥಾನಗಳನ್ನು ಬಿಟ್ಟರೆ ಉಳಿದೆಲ್ಲಾ ಸ್ಥಾನಗಳೂ ಆ ಪಕ್ಷದ ಪಾಲಾಗುತ್ತಿವೆ.

ಕಾಂಗ್ರೆಸ್ (ಐ) ಪಕ್ಷದ ಮುನ್ನಡೆಯಲ್ಲಿ ವಿರೋಧ ಪಕ್ಷಗಳ ಗಣ್ಯರನೇಕರು ಸೋಲಪ್ಪಿದ್ದಾರೆ. ಭಾರತೀಯ ಜನತಾ ಪಕ್ಷದ ಅಧ್ಯಕ್ಷ ಅಟಲ್ ಬಿಹಾರಿ ವಾಜಪೇಯಿ ಆ ಪಕ್ಷದ ಗಣ್ಯರಾದ ರಾಮ್ ಜೇಠ ಮಲಾನಿ ಮತ್ತು ಕೆ. ಎಸ್. ಹೆಗ್ಡೆಯವರ ಸೋಲು ಇದುವರೆಗೆ ಬಂದಿರುವ ಫಲಿತಾಂಶಗಳ ಗಮನಾರ್ಹ ಅಂಶವಾಗಿದೆ.

ಕಾಂಗ್ರೆಸ್ ಪಕ್ಷ ಆಂಧ್ರಪ್ರದೇಶದಲ್ಲಿ ಮಾತ್ರ ಸೋಲಿನ ಸುಳಿಯಲ್ಲಿ ಸಿಕ್ಕಿದೆ. ಅಲ್ಲಿ ಕೇಂದ್ರ ಸರಕಾರದ ಮಂತ್ರಿಗಳಾದ ಪಿ. ಶಿವಶಂಕರ್, ವಿಜಯ ಭಾಸ್ಕರ್ ರೆಡ್ಡಿ ಮತ್ತು ಪಿ. ವಿ. ನರಸಿಂಹರಾವ್ ತೆಲುಗು ದೇಶಂ ಪಕ್ಷದ ಎದುರು ಸೋತರು. ಕರ್ನಾಟಕದಲ್ಲಿ ಕಾಂಗ್ರೆಸ್ ಕಳೆಕೊಂಡ ಸ್ಥಾನಗಳಲ್ಲಿ ಹಣಕಾಸು ಖಾತೆಯ ರಾಜ್ಯ ಸಚಿವ ಎಸ್. ಎಂ. ಕೃಷ್ಣ ಸ್ಪರ್ಧಿಸಿದ್ದ ಮಂಡ್ಯ ಕ್ಷೇತ್ರವೂ ಒಂದು.

ಉತ್ತರ ಭಾರತದಲ್ಲಿ 'ದಮಕಿ' ಪಕ್ಷದ ಅಧ್ಯಕ್ಷ ಚರಣ್‌ಸಿಂಗ್ ಮತ್ತು ಕಾಂಗ್ರೆಸ್ (ಜೆ) ಪಕ್ಷದ ನಾಯಕ ಜಗಜೀವನರಾಮ್ ಅವರು ಜಯದ ಹಾದಿಯಲ್ಲಿರುವ ವರದಿ ಬಂದಿದೆ.

ಸೋಲಿನ ಹಾದಿಯಲ್ಲಿರುವ ವಿರೋಧಿ ಗಣ್ಯರ ಯಾದಿಯಲ್ಲಿ ಕೇಂದ್ರದ ಮಾಜಿ ಅರ್ಥ ಸಚಿವ ಎಚ್. ಎಂ. ಪಟೇಲ್ ಜನತಾ ಅಧ್ಯಕ್ಷ ಚಂದ್ರಶೇಖರ್, ಎಚ್. ಎನ್. ಬಹುಗುಣ, ಮೇನಕಾಗಾಂಧಿ ಮೊದಲಾದವರಿದ್ದಾರೆ.

ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ವಿರುದ್ಧ ಬಂಡಾಯದ ಬಿರುಗಾಳಿಯೆಬ್ಬಿಸಿದ್ದ ಮಾಜಿ ಮುಖ್ಯಮಂತ್ರಿ ಎ. ಆರ್ ಅಂತುಳೆ ಮತ್ತವರ ಬೆಂಬಲಿಗರು ಸೋಲಿನ ಸುಳಿಗೆ ಸಿಕ್ಕಿದ್ದಾರೆ.

ಸಂಪಾದಕೀಯ

ಸಾಕಿನ್ನು ಮೋಸ

ಎರಡು ತಿಂಗಳ ಹಿಂದೆ ಮಡಿದ ಮಾತೆಯ ಮೃತ ದೇಹವನ್ನು ಮನೆಯಲ್ಲಿಟ್ಟು ಜಗತ್ತಿನ ಅತಿ ದೊಡ್ಡ ಗಣರಾಜ್ಯ ಭಾರತದ ಪ್ರಧಾನಿಯಾದ ರಾಜೀವ್ ಗಾಂಧಿ ಈಗ ಜನ ಸಮೂಹದ ಅತಿ ದೊಡ್ಡ ಬೆಂಬಲ ಪಡೆದು ತಮ್ಮ ರಾಜಕೀಯ ನೆಲೆಯನ್ನು ಮತ್ತಷ್ಟು ಗಟ್ಟಿ ಮಾಡಿಕೊಳ್ಳುತ್ತಿದ್ದಾರೆ.

ದೇಶದ ಎಂಟನೆಯ ಲೋಕಸಭೆಗೆ ಮೊನ್ನೆ ನಡೆದ ಚುನಾವಣೆಯ ರಾಜಕೀಯ ವಿದ್ಯಮಾನಗಳ ಹಿನ್ನೆಲೆಯನ್ನು ಅವಲೋಕಿಸಿದರೆ ರಾಜೀವ ಗಾಂಧಿಯವರ ನಾಯಕತ್ವದ ಕಾಂಗ್ರೆಸ್(ಐ) ಪಕ್ಷ ಗಳಿಸುತ್ತಿರುವ ಜಯಗಳ ಸರಮಾಲೆ ಅಚ್ಚರಿಯ ವಿಷಯವೇನಲ್ಲ. ಆದರೆ ಅವರ ಗೆಲುವು ಈ ತೆರನಲ್ಲಿ ಸಾರಾಸಗಟಾಗಿ ವಿರೋಧ ಪಕ್ಷಗಳ ನೆಲೆತಪ್ಪಿಸುವ ದೆಂಬ ನಿರೀಕ್ಷೆ ಅಷ್ಟಾಗಿ ಇರಲಿಲ್ಲ. ನಿರೀಕ್ಷೆಗೆ ಮೀರಿದ ದೊಡ್ಡ ಗೆಲುವು ವ್ಯಕ್ತಿಗಳನ್ನು ಬೆಳೆಸಿ ಸಮೂಹ ಶಕ್ತಿಯನ್ನು ಕುಗ್ಗಿಸುವ ಅಪಾಯವಿದೆ.

1971ರಲ್ಲಿ ರಾಜೀವ ಗಾಂಧಿಯವರ ತಾಯಿ ಇಂದಿರಾ ಗಾಂಧಿಯವರು ಲೋಕಸಭೆಯಲ್ಲಿ ಮೊದಲ ಬಾರಿಗೆ ಮೂರನೇ ಎರಡರಷ್ಟು ಬಹುಮತ ಪಡೆದು ಜನತಂತ್ರದ ನೆಲೆ ಅಲುಗಿಸಲು ಹೊರಟಿದ್ದು ಈಗ ಇತಿಹಾಸಕ್ಕೆ ಸೇರಿಹೋದ ವಿಷಯ. ... ರಾಜೀವ ಗಾಂಧಿ ಈಗ ತಮ್ಮ ತಾಯಿಗಿಂತ ಮಿಗಿಲಾದ ಬಲವನ್ನು ಲೋಕಸಭೆಯಲ್ಲಿ ಗಳಿಸುತ್ತಿದ್ದಾರೆ. ಇದರರ್ಥ ರಾಜೀವ ಗಾಂಧಿಯವರ ನಾಯಕತ್ವ ಈ ದೇಶಕ್ಕೆ ಅನಿವಾರ್ಯವೆಂದಲ್ಲ. ಇತರ ರಾಜಕೀಯ ಪಕ್ಷಗಳು ಮತ್ತು ವ್ಯಕ್ತಿಗಳು ಈ ದೇಶದ ಮುಗ್ಧ ಜನರ ಮನಸ್ಸನ್ನು ಮುಟ್ಟಲಾಗದೆ ಪ್ರತಿಷ್ಠೆ ಬೆರೆತ ಬೂಟಾಟಿಕೆಯ ರಾಜಕೀಯ ಮಾಡಿ ಜನರ ವಿಶ್ವಾಸ ಕಳೆಕೊಂಡಿರುವರೆಂದರ್ಥ. ಸಾಕಷ್ಟು ಸುದೀರ್ಘವಾದ ರಾಜಕೀಯ ಸೆಣಸಾಟದ ನಂತರವೂ ಜನಸಮೂಹದಲ್ಲಿ ನಂಬಿಕೆಯ ನೆಲೆ ಕಂಡುಕೊಳ್ಳಲಾಗದೆ ನೈತಿಕವಾಗಿ ಬಡವಾಗುತ್ತಿರುವ ವಿರೋಧ ಪಕ್ಷಗಳು ನಾಚಿ ತಲೆತಗ್ಗಿಸಬೇಕಾದ ಪರಿಸ್ಥಿತಿ ಇದು. ಹುಟ್ಟಿನಿಂದ ನಿರ್ಧಾರವಾಗುವ ಸಾಮಾಜಿಕ ಅಂತಸ್ತಿಗೆ ಅಂಟಿಕೊಂಡಿರುವ ಭಾರತೀಯ ಸಮಾಜದಲ್ಲಿ ವಿರೋಧ ಪಕ್ಷಗಳು ಪ್ರತಿಷ್ಠಿತ ಜನವರ್ಗದ ತಮ್ಮಟೆಗಳಾಗಿ ಮಾತ್ರ ಉಳಿದಿವೆಯೆಂಬುದು ಈ ಸಲದ ಚುನಾವಣೆಯಲ್ಲಿ ಸಾಬೀತಾಗಿದೆ. ಯಾರು ಎಷ್ಟೇ ಗುಲ್ಲೆಬ್ಬಿಸಿದರೂ, ಪ್ರಚಾರದ ತುತ್ತೂರಿ ಊದಿದರೂ, ಜನತಂತ್ರ ಪ್ರೇಮದ ಧಾರೆ ಹರಿಸಿದರೂ ಈ ಸಮಾಜದ ದುರ್ಬಲರು ಮತ್ತು ಅಲ್ಪಸಂಖ್ಯಾತರು ವಿರೋಧ ಪಕ್ಷಗಳನ್ನು ಅಪ್ಪಿ-ಹಿಪ್ಪೆಯಾಗಲು ಸಿದ್ಧರಿಲ್ಲವೆಂಬುದನ್ನು ಈ ಸಲದ ಚುನಾವಣಾ ಫಲಿತಾಂಶದಲ್ಲಿ ಸ್ಪಷ್ಟವಾಗಿ ಕಾಣಬಹುದು.

ಕರ್ನಾಟಕದಲ್ಲಂತೂ ಇದು ಪೂರ್ಣ ಸತ್ಯ. ಎರಡು ವರ್ಷಗಳ ಹಿಂದೆ ಕಾಂಗ್ರೆಸ್(ಐ)ನ ಗುಂಡೂರಾವ್ ದುರಾಡಳಿತದಿಂದ ರೋಸಿಹೋದ ದುರ್ಬಲ ವರ್ಗ ದೇವರಾಜ ಅರಸು ಕಾರ್ಯಕ್ರಮಕ್ಕೆ ಮತ ನೀಡಿದರು. ಬಂಗಾರಪ್ಪನವರಂತಹ ಹಿಂದುಳಿದ ವರ್ಗದ ನಾಯಕರು ಹಾಗೂ ನಜೀರ್ ಸಾಬ್ ಅವರಂತಹ ಅಲ್ಪಸಂಖ್ಯಾತ ನಾಯಕರು ತಾವು ಅರಸು ಕಾರ್ಯಕ್ರಮವನ್ನು ನಿಷ್ಠೆಯಿಂದ ಆಚರಣೆಗೆ ತರುವುದಾಗಿ ಆಡಿದ ಮಾತನ್ನು ಸಾಮಾನ್ಯ ಜನ ನಂಬಿದರು. ಇದರ ಪರಿಣಾಮವಾಗಿ ಎದ್ದ ಕಾಂಗ್ರೆಸ್(ಐ) ವಿರೋಧಿ ಅಲೆಯಲ್ಲಿ ಜನತಾರಂಗ ಗೆದ್ದಿತು. ಗೆದ್ದ ಮೇಲೆ ರಂಗ ಹೋಗಿ ಜನತಾ ಆಯಿತು. ಈ ವಂಚನೆ ಅಲ್ಲಿಗೇ ನಿಲ್ಲದೆ ಅರಸು ಕಾರ್ಯಕ್ರಮಗಳೂ ಅಡಿಗೆ ಬಿದ್ದವು. ಅವರ ಹೆಸರೂ ಮರೆತು ಹೋಯಿತು.

ದುರ್ಬಲ ವರ್ಗಗಳ ವಿದ್ಯಾವಂತ ಯುವಕರಿಗೆ ಸರಕಾರಿ ನೌಕರಿಯ ಸದವಕಾಶಕ್ಕೆ ಅರಸು ವಿಧಿಸಿದ ಮೀಸಲಾತಿ ನಿಯಮದ ಮೇಲೆ ಜನತಾ ... ಮಾಡಲಾಯಿತು. ಪ್ರತಿಷ್ಠಿತ ವರ್ಗದವರಿಂದ ತುಂಬಿರುವ ಸರಕಾರಿ ನೌಕರರ ನಿವೃತ್ತಿ ವಯೋಮಿತಿಯನ್ನು ಮೂರು ವರ್ಷ ಹೆಚ್ಚಿಸಿತು. ದುರ್ಬಲ ವರ್ಗದವರಿಗೆ ರಾಜ್ಯದ ಜನತಾ ಸರಕಾರ ಮಾಡಿದ ದೊಡ್ಡ ದ್ರೋಹವಿದು.

ಇದು ದ್ರೋಹ ಎಂಬುದನ್ನು ಸಾರಿ ಹೇಳುವ ಬಾಯಿಬಲ ಈ ದುರ್ಬಲ ವರ್ಗಕ್ಕೆ ಇಲ್ಲದಿರಬಹುದು. ಅದನ್ನರಿತುಕೊಳ್ಳುವ ಬುದ್ಧಿಬಲ ಅವರಿಗಿದೆ ಎಂಬುದನ್ನು ಈಗ ನಡೆದ ಲೋಕಸಭಾ ಚುನಾವಣೆಯಲ್ಲಿ ತೋರಿಸಿದ್ದಾರೆ. ಅಧಿಕಾರಬಲದಿಂದ ಪ್ರಚಾರದ ಗುಲ್ಲೆಬ್ಬಿಸಿ ತನಗೆಂದೂ ಇಲ್ಲದ ಬಲದ ಪ್ರತಿಷ್ಠೆಯನ್ನು ಮೆರೆದಾಡಿಸಿದ ಜನತಾ ಪಕ್ಷ ಈಗ ಮಣ್ಣು ಮುಕ್ಕಿದೆ. ಜನತೆ ಜನತಾ ಪಕ್ಷದ ಹಿಂದಿಲ್ಲವೆಂಬುದೀಗ ಸಾಬೀತಾಗಿದೆ. 1983ರ ವಿಧಾನಸಭೆ ಚುನಾವಣೆಯಲ್ಲೂ ರಾಜ್ಯದ ಜನತೆ ಜನತಾ ಪಕ್ಷಕ್ಕೆ ಮತ ನೀಡಿಲ್ಲವೆಂಬ ಅಂಶವೂ ಎದ್ದು ಬಂದಿದೆ.

ಜನಬೆಂಬಲವಿಲ್ಲದ ಒಂದು ಪಕ್ಷ ಇನ್ನೂ ಅಧಿಕಾರಕ್ಕೆ ಅಂಟಿಕೊಂಡು ಮೋಸವನ್ನು ಮುಂದುವರಿಸಬಾರದು. ಮರ್ಯಾದೆಯಿಂದ ಮನೆಗೆ ಹೋಗಬೇಕು. ●

ವಿಜೇತ ಜನಾರ್ದನ ಪೂಜಾರಿಯವರಿಗೆ ...

ಅಸೆಂಬ್ಲಿಯ ವಿಸರ್ಜನೆ ಇಂದು ನಿರ್ಧಾರ

(ಮುಂಗಾರು ವರದಿ)

ಬೆಂಗಳೂರು, ಡಿ. 28-ರಾಜ್ಯದಲ್ಲಿ ಕಾಂಗ್ರೆಸ್ (ಐ) ಪಕ್ಷವು ಪ್ರಚಂಡ ಬಹುಮತದಿಂದ ಮುನ್ನಡೆಯುತ್ತಿರುವ ಹಿನ್ನೆಲೆಯಲ್ಲಿ ನಾಳೆ ಬೆಳಗ್ಗೆ 9 ಗಂಟೆಗೆ ಇಲ್ಲಿ ಸಮಾವೇಶಗೊಳ್ಳಲಿರುವ ರಾಜ್ಯ ವಿಧಾನಸಭೆ ವಿಸರ್ಜನೆಗೆ ತೀರ್ಮಾನ ಕೈಗೊಳ್ಳುವ ಬಗ್ಗೆ ರಾಜಧಾನಿಯ ರಾಜಕೀಯ ವಲಯದಲ್ಲಿ ಭಾರೀ ಊಹಾಪೋಹಗಳೆದ್ದಿವೆ.

ಪ್ರಸ್ತುತ ಚುನಾವಣೆಯ ರಾಜ್ಯದ ರಾಜಕೀಯ ಪರಿಸ್ಥಿತಿಯ ಬಗ್ಗೆ ಅಧ್ಯಯನ ನಡೆಸಲು ಇಂದು ಬೆಳಗ್ಗೆ ಸಮಾವೇಶಗೊಂಡಿದ್ದ ... ಸಭೆಯು ಫಲಿತಾಂಶದ ಬಗ್ಗೆ ಸ್ಪಷ್ಟ ಚಿತ್ರ ಕಾಣಬರದಿದ್ದ ಪ್ರಯುಕ್ತ ಸಭೆಯನ್ನು ನಾಳೆಗೆ ಮುಂದೂಡಲಾಯಿತೆಂದು ಗೊತ್ತಾಗಿದೆ.

ಇಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ತಿಳಿಯಲು ಸಚಿವರೊಬ್ಬರನ್ನು 'ಮುಂಗಾರು' ಸಂಪರ್ಕಿಸಿದಾಗ ಅವರು ಯಾವ ವಿಷಯವನ್ನು ತಿಳಿಸಲು ನಿರಾಕರಿಸಿದರು.

ಪ್ರಕಟವಾಗುತ್ತಿರುವ ಫಲಿತಾಂಶದ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸಲು ಸಹಾ ಸಚಿವರು ನಿರಾಕರಿಸಿದರು.

ಯಾವುದೇ ವಿಷಯವನ್ನು ಇಂದು ಕೇಳಬೇಡಿ ನಾಳೆಯೇ ಸಭೆ ಸೇರಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

ಕರ್ನಾಟಕದಲ್ಲೂ ವಿಜಯ ಯಾತ್ರೆ

(ಮುಂಗಾರು ವರದಿ)

ಬೆಂಗಳೂರು, ಡಿ. 28- ಕಾಂಗ್ರೆಯ ಇಂದಿನ ವಿಜಯ ಯಾತ್ರೆಯನ್ನು ಮೊದಲಿಗೆ ಆಚರಿಸಿದವರು ಕೇಂದ್ರ ಸಚಿವರಾದ ವೀರೇಂದ್ರ ಪಾಟೀಲ್ ಮತ್ತು ಬಿ. ಜನಾರ್ದನ ಪೂಜಾರಿ. ಇವರ ಜೊತೆಗೆ ಕಾಂಗ್ರೆ ಪಕ್ಷದ ವಿಧಾನ ಪರಿಷತ್ ಸದಸ್ಯೆ ಕುಮಾರಿ ತಾರಾದೇವಿ ಅವರೂ ವಿಜಯ ಯಾತ್ರೆಯಲ್ಲಿ ಪಾಲ್ಗೊಂಡರು.

ಹಿಂದೊಮ್ಮೆ ಇಂದಿರಾ ಗಾಂಧಿ ಅವರ ಕ್ಷೇತ್ರವಾಗಿದ್ದ ಚಿಕ್ಕಮಗಳೂರಿನಿಂದ ಆಯ್ಕೆಯಾದ ತಾರಾದೇವಿ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಸಿ.ಪಿ.ಐ.ನ ಬಿ. ಕೆ. ಸುಂದರೇಶನ್ ಅವರನ್ನು ಒಂದೂವರೆ ಲಕ್ಷ ಮತಗಳ ಅಂತರದಿಂದ ಪರಾಭವ ಗೊಳಿಸಿದ್ದಾರೆ.

ವಿವಾದಾತ್ಮಕ "ಸಾಲಮೇಳ" ಕಾರ್ಯಕ್ರಮದ ಶಿಲ್ಪಿ ಬಿ. ಜನಾರ್ದನ ಪೂಜಾರಿ ಅವರು ತಾವು 1977 ರಿಂದಲೂ ಪ್ರತಿನಿಧಿಸುತ್ತಿದ್ದ ಮಂಗಳೂರು ಕ್ಷೇತ್ರದ ಸ್ಥಾನವನ್ನು ಉಳಿಸಿಕೊಂಡಿದ್ದಾರೆ. ಪೂಜಾರಿ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಕೆ. ರಾಮ ಭಟ್ ಅವರನ್ನು 1.19 ಲಕ್ಷ ಮತಗಳ ಅಂತರದಿಂದ ಪರಾಭವಗೊಳಿಸಿದ್ದಾರೆ,

ಭಾಗಲ್‌ಕೋಟೆಯಿಂದ ಗುಲ್ಬರ್ಗಕ್ಕೆ ಈ ಬಾರಿ ತಮ್ಮ ಕ್ಷೇತ್ರವನ್ನು ಬದಲಿಸಿದ ವೀರೇಂದ್ರ ಪಾಟೀಲ್ ಅವರು ಜನತಾದ ವಿದ್ಯಾಧರ ಗುರೂಜಿ ಅವರನ್ನು ಐವತ್ತುಸಾವಿರ ಮತಗಳ ಅಂತರದಿಂದ ಸೋಲಿಸಿದ್ದಾರೆ.

ಸೋತ ಜನತಾ ಅಭ್ಯರ್ಥಿ ವಿದ್ಯಾಧರ ಗುರೂಜಿ ಅವರು ಹೈದರಾಬಾದ್-ಕರ್ನಾಟಕ ಪ್ರಾಂತ್ಯದಲ್ಲಿ ಹಿಂದುಳಿದ ವರ್ಗಗಳ ಚಳವಳಿಯ ಪಿತಾಮಹನೆಂದು ಹೆಸರಾಗಿದ್ದವರು. ವೀರೇಂದ್ರ ಪಾಟೀಲ್ ಕಸಿದುಕೊಂಡ ಈ ಕ್ಷೇತ್ರದಿಂದ ಕಾಂಗ್ರೆ ಪಕ್ಷದ ಕಾರ್ಯದರ್ಶಿ ದಿವಂಗತ ಸಿ. ಎಂ. ಸ್ಟೀಫನ್ ಅವರು ಈ ಮೊದಲು ಆಯ್ಕೆಯಾಗಿದ್ದರು.

ರಾಯಚೂರು ಕ್ಷೇತ್ರದಲ್ಲಿ ಕಾಂಗ್ರೆಯ ಬಿ. ವಿ. ದೇಸಾಯಿ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಜನತಾದ ವಿಶ್ವನಾಥ ರೆಡ್ಡಿ ಮುದ್ನಾಳ್ ಅವರನ್ನು ಅರವತ್ತು ಸಾವಿರ ಮತಗಳ ಅಂತರದಿಂದ ಸೋಲಿಸಿ ಆಯ್ಕೆಯಾಗಿದ್ದಾರೆ.

ಬಿಜಾಪುರ ಕ್ಷೇತ್ರದಲ್ಲಿ, ಜನತಾದ ಎಸ್. ಎಂ. ಗುರಡ್ಡಿ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ ಆರ್. ಬಿ. ಚೌಧುರಿ ಅವರನ್ನು 2,600 ಮತಗಳ ಕಡಿಮೆ ಅಂತರದಿಂದ ಸೋಲಿಸಿ ಆಯ್ಕೆಯಾಗಿದ್ದಾರೆ.

ಕೆನರಾ ಕ್ಷೇತ್ರದಲ್ಲಿ, ಕಾಂಗ್ರೆಯ ಜಿ. ದೇವರಾಜ್ ನಾಯಕ್ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಜನತಾದ ಜಿ. ಎಸ್. ಅಜ್ಜಿಬಾಳ್ ಅವರನ್ನು 49,000 ಮತಗಳ ಅಂತರದಿಂದ ಸೋಲಿಸಿ ಆಯ್ಕೆಯಾಗಿದ್ದಾರೆ.

ರಾಜಕುವರ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು (ಕಾಂಗ್ರೆ) ತಮ್ಮ ಸಮೀಪದ ಪ್ರತಿಸ್ಪರ್ಧಿ ಜನತಾದ ಕೆ. ಪಿ. ಶಾಂತಮೂರ್ತಿ ಅವರನ್ನು 65,000 ಮತಗಳ ಅಂತರದಿಂದ ಸೋಲಿಸಿ ಮೈಸೂರು ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ.

ಬಾಗಲ್‌ಕೋಟೆ ಕ್ಷೇತ್ರದಲ್ಲಿ, ಕಾಂಗ್ರೆಯ ಎಚ್. ಬಿ. ಪಾಟೀಲ್ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಜನತಾದ ಎಂ. ಪಿ. ನಾಡಗೌಡ ಅವರನ್ನು 12,500 ಮತಗಳ ಅಂತರದಿಂದ ಸೋಲಿಸಿ ಆಯ್ಕೆಯಾಗಿದ್ದಾರೆ.

ಕಾಂಗ್ರೆಯ ಶ್ರೀಮತಿ ಬಸವರಾಜೇಶ್ವರಿ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಜನತಾದ ಎಂ. ಪಿ. ಪ್ರಕಾಶ್ ಅವರನ್ನು 72,286 ಮತಗಳಿಂದ ಪರಾಭವಗೊಳಿಸಿ ಬಳ್ಳಾರಿ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ.

ತುಂತುರು



ಚರಣ್‌ಸಿಂಗ್ ಆಯ್ಕೆ



ನವದೆಹಲಿ, ಡಿ. 28-ದಮಕಿಪದ ಅಧ್ಯಕ್ಷ ಚರಣ್‌ಸಿಂಗ್ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿಯಾದ ಕಾಂಗ್ರೆಯ ಮಹೇಶ್ ಚಾಂದ್ ಅವರನ್ನು 1,05,000 ಮತಗಳಿಂದ ಸೋಲಿಸಿ ಭಾಗ್‌ಪತ್ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದಾರೆ.

ರಾಜೀವ್ ಮುನ್ನಡೆ

ರಾಯ್‌ಬರೇಲಿ, ಡಿ. 28-ಪ್ರಧಾನಿ ರಾಜೀವ್ ಗಾಂಧಿ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ರಾಷ್ಟ್ರೀಯ ಸಂಜಯ ಮಂಚದ ಅಧ್ಯಕ್ಷೆ ಮೇನಕಾ ಗಾಂಧಿ ಅವರಿಗಿಂತ 1,00,000 ಮತಗಳಿಂದ ಮುಂದಿದ್ದಾರೆ.

ರಾಜೀನಾಮೆ ಕೊಡಿ: ಬಂಗಾರಪ್ಪ ಕರೆ

(ಮುಂಗಾರು ವರದಿ)

ಬೆಂಗಳೂರು, ಡಿ. 28-ಜನಬೆಂಬಲ ಇರುವವರೆಗೆ ಅಧಿಕಾರದಲ್ಲಿ ಮುಂದುವರಿಯುವುದಾಗಿ ಘೋಷಿಸಿಕೊಂಡಿದ್ದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ಕೂಡಲೆ ರಾಜೀನಾಮೆ ನೀಡಬೇಕು ಎಂದು ಕಾಂಗ್ರೆ ನಾಯಕ ಎಸ್. ಬಂಗಾರಪ್ಪನವರು ಒತ್ತಾಯಿಸಿದ್ದಾರೆ.

ರಾಜ್ಯಾದ್ಯಂತ ಬಹುತೇಕ ಕ್ಷೇತ್ರಗಳಲ್ಲಿ ಕಾಂಗ್ರೆಸ್ (ಐ) ಮುನ್ನಡೆ ಪಡೆದಿದ್ದು, ರಾಜ್ಯದ ಜನತೆ ದಿವಂಗತ ಪ್ರಧಾನಿ ಇಂದಿರಾ ಗಾಂಧಿಯವರ ಚಿಂತನೆ ಮತ್ತು ಕಾರ್ಯಕ್ರಮಗಳಿಗೆ ಬೆಂಬಲ ನೀಡುವುದರ ಮೂಲಕ ಜನತಾ ಪಕ್ಷವನ್ನು ತಿರಸ್ಕರಿಸಲಾಗಿದೆ ಎಂದು ಅವರು ಹೇಳಿದರು.

'ಮುಂಗಾರು' ಜತೆ ಮಾತನಾಡಿದ ಬಂಗಾರಪ್ಪ ರಾಜ್ಯದ ಜನತೆ ಕಾಂಗ್ರೆಸ್ (ಐ)ಗೆ ಅಧಿಕ ಬೆಂಬಲ ನೀಡುವುದರ ಮೂಲಕ ಪ್ರಧಾನಿ ರಾಜೀವ್ ಗಾಂಧಿಯವರ ಕೈ ಬಲಪಡಿಸಿದ್ದಾರೆಂದು ತಿಳಿಸಿ ಕಾಂಗ್ರೆಸ್ (ಐ)ಗೆ ಬಹುಮತ ನೀಡಿರುವ ಕರ್ನಾಟಕ ಜನತೆಗೆ ವೈಯಕ್ತಿಕವಾಗಿ ಮತ್ತು ಪಕ್ಷದ ಪರವಾಗಿ ಬಂಗಾರಪ್ಪ ಕೃತಜ್ಞತೆ ಅರ್ಪಿಸಿದರು. (ಐದನೇ ಪುಟಕ್ಕೆ)

ದಂಡವತೆ ಗೆಲುವು

ರತ್ನಗಿರಿ, ಡಿ. 28- ಜನತಾ ಪಕ್ಷದ ನಾಯಕ ಮಧುದಂಡವತೆ ಅವರು ರಾಜಾಪುರ ಲೋಕಸಭಾ ಕ್ಷೇತ್ರದಿಂದ ತಮ್ಮ ಸಮೀಪ ಪ್ರತಿಸ್ಪರ್ಧಿ ಕಾಂಗ್ರೆಸ ಧಾಯಗುಡೆ ಅವರನ್ನು 25,930 ಓಟುಗಳ ಅಂತರದಿಂದ ಸೋಲಿಸಿ ಆಯ್ಕೆಯಾಗಿದ್ದಾರೆ.

ಮಂಗಳೂರು: 3ನೇ ಬಾರಿಗೆ ಪೂಜಾರಿ ಲೋಕಸಭೆಗೆ

ಮಂಗಳೂರು, ಡಿ. 28 - ಕೇಂದ್ರ ಉಪಹಣಕಾಸು ಸಚಿವ ಬಿ. ಜನಾರ್ದನ ಪೂಜಾರಿ ಅವರು 1, 19, 399 ಮತಗಳ ಜಯಗಳಿಸಿ, ಸತತ ಮೂರನೇ ಬಾರಿಗೆ ಮಂಗಳೂರು ಲೋಕಸಭಾ ಕ್ಷೇತ್ರದ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದಾರೆ.

ಈ ತಿಂಗಳ 24 ರಂದು ನಡೆದ ಮತಗಳ ಎಣಿಕೆಯು ಇಂದು ಇಲ್ಲಿನ ಕದ್ರಿ ಗುಡ್ಡೆಯ ಕರ್ನಾಟಕ ಪಾಲಿಟೆಕ್ನಿಕ್‌ನಲ್ಲಿ ನಡೆಯಿತು. ಪೂಜಾರಿಯವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಬಿ. ಜೆ. ಪಿ. ಯ ಕೆ. ರಾಮ ಭಟ್ ಅವರಿಗಿಂತ ಮುಂದಿದ್ದು, ಅವರ ನಡುವಣ ಅಂತರ ಏರುತ್ತಲೇ ಹೋಯಿತು. ಜಿಲ್ಲಾಧಿಕಾರಿ ಸುಧೀರ್ ಕೃಷ್ಣ ಅವರು ಮತಗಳ ಎಣಿಕೆಯ ನೇತೃತ್ವ ವಹಿಸಿದ್ದರು.

ಅಪರಾಹ್ನ 2. 50ರ ಹೊತ್ತಿಗೆ ಎಣಿಕೆ ಪೂರ್ಣಗೊಂಡಿತ್ತು. ಆದರೆ ಅಧಿಕೃತ ಪ್ರಕಟನೆಗೆ ನಾಲ್ಕು ಗಂಟೆಯನ್ನು ನಿಗದಿ ಪಡಿಸಲಾಗಿತ್ತು.

ರಾಜ್ಯದಲ್ಲಿ ಮೊದಲು ಪ್ರಕಟಗೊಂಡ ಸ್ಥಾನ ಮಂಗಳೂರು. ಅದು ಐ. ಕಾಂಗ್ರೆಸ ಜಯ ಕೂಡಾ ಅಗ 4. 30ರ ಪ್ರದೇಶ ಸಮಾಚಾರದಲ್ಲಿ ರಾಜ್ಯಾದ್ಯಂತ ಪ್ರಸಾರ ಗೊಂಡಿತು.

ಮಂಗಳೂರು ಏಳು ಬಾರಿ ಕಾಂಗ್ರೆಸ್ ಅಭ್ಯರ್ಥಿಗಳನ್ನೇ ಲೋಕಸಭೆಗೆ ಕಳಿಸಿದ ತನ್ನ ಪರಂಪರೆಯನ್ನು ಈ ಬಾರಿ ಕೂಡಾ ಉಳಿಸಿಕೊಂಡಿತು. 1980ರ ಚುನಾವಣೆಯಲ್ಲಿ ಪೂಜಾರಿಯವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಅವಿಭಜಿತ ಜನತಾ ಪಕ್ಷದ ಕರಂಬಳ್ಳಿ ಸಂಜೀವ ಶೆಟ್ಟಿ ಅವರನ್ನು 1, 28, 897 ಮತಗಳ ಅಂತರದಿಂದ ಸೋಲಿಸಿದ್ದರು. ಆ ಬಳಿಕ 1983ರಲ್ಲಿ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಈ ಲೋಕಸಭಾ ಕ್ಷೇತ್ರಕ್ಕೆ ಸೇರಿದ ಎಂಟು ವಿಧಾನ ಸಭಾ ಸ್ಥಾನಗಳಲ್ಲಿ ಆರನ್ನು ಕಾಂಗ್ರೆಸೇತರ ಪಕ್ಷಗಳವರು ಗೆದ್ದಿದ್ದರು. ಆದರೆ ಪ್ರಸ್ತುತ ಚುನಾವಣೆಯಲ್ಲಿ ಎಲ್ಲ ವಿಧಾನ ಸಭಾ ಕ್ಷೇತ್ರಗಳಲ್ಲೂ ಕಾಂಗ್ರೆ ಮುನ್ನಡೆ ಗಳಿಸಿರುವುದು ಗಮನಾರ್ಹ.

ಮಂಗಳೂರು ಲೋಕಸಭಾ ಕ್ಷೇತ್ರದ 6,70,001 ಮತದಾರರಲ್ಲಿ 4, 82, 800 ಮತಗಳು ಸಿಂಧುವಾಗಿವೆ. 6, 884 ಮತಗಳು ಕುಲಗೆಟ್ಟಿವೆ. ಜನಾರ್ದನ ಪೂಜಾರಿ ಅವರಿಗೆ 2, 99, 490 ಮತಗಳು ಹಾಗೂ ರಾಮ ಭಟ್ ಅವರಿಗೆ 1, 80, 091 ಮತಗಳು ಬಂದಿವೆ. ಪಕ್ಷೇತರ ಅಭ್ಯರ್ಥಿ ಏಕನಾಥ ನಾಯಕ್ ಅವರಿಗೆ 3,219.

ಉಣ್ಣಿಕೃಷ್ಣನ್ ವಿಜಯ

ತಿರುವನಂತಪುರ, ಡಿ. 28- ಕಾಂಗ್ರೆಸ್(ಎಸ್) ಪಕ್ಷದ ಕೆ. ಪಿ. ಉಣ್ಣಿಕೃಷ್ಣನ್ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿಯಾದ ಕೆ. ಎಮ್. ರಾಧಾಕೃಷ್ಣನ್(ಎಸ್. ಆರ್. ಪಿ.) ಅವರನ್ನು ಹತ್ತು ಸಾವಿರ ಮತಗಳಿಂದ ಸೋಲಿಸಿ ಚುನಾಯಿತರಾಗಿದ್ದಾರೆ.

ನಂಜೇಗೌಡ ಆಯ್ಕೆ



ಬೆಂಗಳೂರು, ಡಿ. 28 – ಕಾಂಗ್ರೆಸ್ (ಐ) ಪಕ್ಷದ ಹೆಚ್. ಎನ್. ನಂಜೇಗೌಡ ಅವರು ಜನತಾ ಪಕ್ಷದ ಅಭ್ಯರ್ಥಿ ಕೆ. ಬಿ. ಮಲ್ಲಪ್ಪ ಅವರನ್ನು 28,000 ಮತಗಳ ಅಂತರದಿಂದ ಸೋಲಿಸುವ ಮೂಲಕ ತಮ್ಮ ಸ್ಥಾನವನ್ನು ಉಳಿಸಿ ಕೊಂಡಿದ್ದಾರೆ.

ಆಸ್ಕರ್ ಫೆರ್ನಾಂಡಿಸ್ ಭಾರೀ ಗೆಲುವು

ಮಂಗಳೂರು, ಡಿ. 28-ಉಡುಪಿ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆ ಅಭ್ಯರ್ಥಿ, ಅಖಿಲ ಭಾರತ ಕಾಂಗ್ರೆ ಜಂಟಿ ಕಾರ್ಯದರ್ಶಿ ಆಸ್ಕರ್ ಫೆರ್ನಾಂಡೀಸ್ ಅವರು ಪ್ರಚಂಡ ಗೆಲುವು ಸಾಧಿಸಿದ್ದಾರೆ.

ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಬಿ.ಜೆ.ಪಿ. ಅಭ್ಯರ್ಥಿ, ಬಿಜೆಪಿ ಉಪಾಧ್ಯಕ್ಷ ಕೆ.ಎಸ್. ಹೆಗ್ಡೆ ಅವರನ್ನು ಒಂದು ಲಕ್ಷದ ನಲುವತ್ತೆರಡು ಸಾವಿರದ ಮುನ್ನೂರ ಎಪ್ಪತ್ತು ಮತಗಳ ಅಂತರದಿಂದ ಸೋಲಿಸಿದರು.

ಕಣದಲ್ಲಿದ್ದ ಐದೂ ಜನ ಪಕ್ಷೇತರರು ಠೇವಣಿ ಕಳೆಕೊಂಡಿದ್ದಾರೆ.

ಮತಗಳ ವಿವರ ಹೀಗಿದೆ :

ಒಟ್ಟು ಮತದಾರರು :	6,79,470
ಚಲಾವಣೆಯಾದ ಮತಗಳು :	4,67,522
ಕುಲಗೆಟ್ಟ ಮತಗಳು :	6,994
ಆಸ್ಕರ್ ಫೆರ್ನಾಂಡೀಸ್ (ಕಾಂಗ್ರೆ)	2,87,293
ಕೆ. ಎಸ್. ಹೆಗ್ಡೆ (ಬಿಜೆಪಿ)	1,44,923
ಕೆ. ಆರ್. ಶ್ರೀಯಾನ್ (ಸಿಪಿಐಎಂ)	14,143
ದೀಪಕ್ ಕುಮಾರ್ (ಪಕ್ಷೇತರ)	1,540
ಗೋಪಾಲಕೃಷ್ಣ ಶೆಣೈ (ಪಕ್ಷೇತರ)	2,4 96
ಮಂಜುನಾಥ್ (ಪಕ್ಷೇತರ)	5,160
ಬಾಳಗಟ್ಟ ರಾಮಚಂದ್ರ ಭಟ್ (ಪಕ್ಷೇತರ)	2,267
ರಾಮಯ್ಯ ಆಚಾರ್ಯ (ಪಕ್ಷೇತರ)	2,706

ಪಕ್ಷಗಳ ಬಲಾಬಲ

ಇಂದು ಬೆಳಗ್ಗೆ 2 ಗಂಟೆಯವರೆಗೆ ಪ್ರಕಟವಾಗಿರುವ ಚುನಾವಣಾ ಫಲಿತಾಂಶಗಳ ಮೇರೆಗೆ ವಿವಿಧ ಪಕ್ಷಗಳ ಬಲಾಬಲ ಇಂತಿವೆ:

ಒಟ್ಟು ಲೋಕಸಭಾ ಸ್ಥಾನಗಳು 544.(ನಾಮಕರಣಗೊಂಡ ಎರಡು ಸದಸ್ಯರನ್ನು ಒಳಗೊಂಡಂತೆ)

ಪ್ರಕಟಿಸಬೇಕಾದ ಸ್ಥಾನಗಳು	—	508
ಪ್ರಕಟಿತ ಸ್ಥಾನಗಳು	—	229
ಕಾಂಗ್ರೆ	—	176
ಜನತಾ	—	8
ಬಿಜೆಪಿ	—	2
ದಮಕಿಪ	—	1
ಸಿಪಿಐ (ಎಂ)	—	7
ಸಿಪಿಐ	—	—
ಕಾಂಗ್ರೆಸ್ ಎಸ್	—	3
ತೆಲುಗು ದೇಶಂ	—	23
ಅಣ್ಣಾ ಡಿ.ಎಂ.ಕೆ	—	—
ಪಕ್ಷೇತರರು	—	9
ಇತರರು	—	—

ಕರ್ನಾಟಕದಲ್ಲಿ

ಒಟ್ಟು ಸ್ಥಾನಗಳು	—	28
ಪ್ರಕಟಿತ ಸ್ಥಾನಗಳು	—	28
ಕಾಂಗ್ರೆ	—	24
ಜನತಾ	—	4

ಕಾರ್ಮಿಕರ ಖಾಯಂ: ದಲಿತರ ಧರಣಿ

ಮೂಡಿಗೆರೆ, ಡಿ. 28 – ಇಲ್ಲಿನ ಪೌರ ಕಾರ್ಮಿಕರನ್ನು ಖಾಯಂ ಗೊಳಿಸುವಂತೆ ಒತ್ತಾಯಿಸಿ, ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಇತ್ತೀಚೆಗೆ ಪುರಸಭೆ ಕಚೇರಿ ಎದುರು ಸಾಂಕೇತಿಕ ಮುಷ್ಕರ ನಡೆಸಿತು.

ಮನೆ ಇಲ್ಲದವರಿಗೆ ಮನೆ, ಬೀದಿಗಳಿಗೆ ವಿದ್ಯುತ್ ದೀಪ, ಶೌಚಾಲಯ ನಿರ್ಮಾಣ ಇತ್ಯಾದಿ ಹತ್ತು ಬೇಡಿಕೆಗಳನ್ನು ಈಡೇರಿಸಲು ಸಮಿತಿ ಒತ್ತಾಯಿಸಿದೆ.

ಕೆಲವು ಪೌರಕಾರ್ಮಿಕರು ದಿನಕ್ಕೆ ಕೇವಲ ಆರು ರೂ.ಗೆ ದುಡಿಯುತ್ತಿದ್ದಾರೆ ಎಂದು ಸಮಿತಿ ತಿಳಿಸಿದೆ.

ಮುಷ್ಕರದಲ್ಲಿ ಭಾಗವಹಿಸಿದ್ದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ದಲಿತ ನೌಕರರ ಒಕ್ಕೂಟದ ಸಂಚಾಲಕ ನಂಜುಂಡ ಅವರು ಸಂಘಟಿತ ಹೋರಾಟದಿಂದ ಮಾತ್ರ ಸಾಧ್ಯವೆಂದು ಹೇಳಿದರು.

ಸಮುದಾಯ ಭವನ ನಿರ್ಮಾಣಕ್ಕೆ ಕಳೆದ ಹತ್ತು ವರ್ಷಗಳಿಂದ ಒತ್ತಾಯಿಸಿದ್ದರೂ, ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸದಿರುವುದನ್ನು ಅವರು ಖಂಡಿಸಿದರು.

ಅನ್ಯಾಯಗಳ ವಿರುದ್ಧ ಹೋರಾಡಲು ಕೈಯಲ್ಲಿರುವ ಪೊರಕೆ ಮತ್ತು ಗುದ್ದಲಿಗಳೇ ಸಾಕು ಎಂದು ಕಲ್ಲಯ್ಯ ತಿಳಿಸಿದರು.

ಮುಷ್ಕರ ನಿರತ ಸ್ಥಳಕ್ಕೆ ಬಂದ ರಾಜಕಾರಣಿಗಳಿಗೆ ಕಾರ್ಯಕರ್ತರು ಛೀಮಾರಿ ಹಾಕಿದರು.

ಮುಂದಿನ ಫೆಬ್ರುವರಿ ಒಳಗೆ ಎಲ್ಲಾ ಬೇಡಿಕೆಗಳನ್ನು ಈಡೇರಿಸದಿದ್ದರೆ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಸಂಚಾಲಕರು ಎಚ್ಚರಿಸಿದ್ದಾರೆ.

ಬೆಂಬಲ

ದಲಿತರ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಧರಣಿ ನಡೆಸಿದ ದ.ಸಂ.ಸ.ಗೆ. ದಲಿತ ನೌಕರರ ಒಕ್ಕೂಟ ತನ್ನ ಬೆಂಬಲ ನೀಡಿದೆ.

ಪತ್ರಿಕಾ ಹೇಳಿಕೆ ನೀಡಿರುವ ಸಂಚಾಲಕ ನಂಜುಂಡ ಅವರು ದಲಿತ ಕಾಲನಿಯಲ್ಲಿರುವ ಶರಾಯಿ ಅಂಗಡಿಯನ್ನು ತೆರವು ಮಾಡುವಂತೆ ಒತ್ತಾಯಿಸಿದ್ದಾರೆ.

ಹೆಸರು ನಾಪತ್ತೆ ದಮಕಿಪ ಆಪಾದನೆ

ಶಿವಮೊಗ್ಗ, ಡಿ. 28 – ಈ ಬಾರಿಯ ಲೋಕಸಭಾ ಚುನಾವಣಾ ಮತದಾರರ ಪಟ್ಟಿಯಲ್ಲಿ, ಈ ಕ್ಷೇತ್ರದಲ್ಲಿ ಹಲವಾರು ಕಡೆ, ಸಾವಿರಾರು ಮತದಾರರ ಹೆಸರುಗಳು ಬಿಟ್ಟುಹೋಗಿರುವಲ್ಲಿ "ಕೆಲವು ಅಧಿಕಾರಿಗಳ ಕೈವಾಡವಿದೆ" ಎಂದು ಜಿಲ್ಲಾ ದ. ಮು. ಕಿ. ಪಕ್ಷ ಆಪಾದಿಸಿದೆ.

1983ರ ವಿಧಾನಸಭಾ ಚುನಾವಣೆ ಮತ್ತು ನಗರಸಭಾ ಚುನಾವಣೆಗಳ ಸಮಯದಲ್ಲಿದ್ದ ಹೆಸರುಗಳು ಈ ಬಾರಿ ಕಾಣೆಯಾಗಿರುವುದನ್ನು ನೋಡಿದರೆ ಅಧಿಕಾರಿಗಳು ಉದ್ದೇಶಪೂರ್ವಕವಾಗಿಯೇ ಹೀಗೆ ಮಾಡಿರುವಂತಿದೆ ಎಂದೂ ದ. ಮು. ಕಿ. ಪಕ್ಷ ತಿಳಿಸಿದೆ.

ಮತದಾರರ ಪಟ್ಟಿಯಲ್ಲಿ ಬಿಟ್ಟುಹೋಗಿರುವ ಮತದಾರರನ್ನು ತಕ್ಷಣ ಪಟ್ಟಿಯಲ್ಲಿ ಸೇರಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಒತ್ತಾಯಿಸಿ, ಜಿಲ್ಲಾ ದ. ಮು. ಕಿ. ಪಕ್ಷದ ಅಧ್ಯಕ್ಷ ಹಿ. ಪುಟ್ಟಯ್ಯ ಅವರ ನೇತೃತ್ವದಲ್ಲಿ ನಿಯೋಗವೊಂದು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿದೆ.

ಉದ್ಘಾಟನೆ

ಸೋಮವಾರಪೇಟೆ, ಡಿ. 28– ರಾಜ್ಯ ಸರ್ಕಾರದ 'ಭಾಗ್ಯ ಜ್ಯೋತಿ ಯೋಜನೆಯನ್ವಯ' ಇಲ್ಲಿನ ಗಾಂಧಿನಗರದ 21 ದಲಿತ ಕುಟುಂಬಗಳಿಗೆ ಉಚಿತ ವಿದ್ಯುತ್ ಸೌಲಭ್ಯವನ್ನು ಅರಣ್ಯ ಸಚಿವ ಬಿ. ಎ. ಜೀವಿಜಯ ಅವರು ಇತ್ತೀಚೆಗೆ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು ಜನತಾ ಸರ್ಕಾರ ದಲಿತರ, ಹಿಂದುಳಿದವರ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ ಎಂದು ತಿಳಿಸಿದರು.

ಕೈಗಾರಿಕೆಯಲ್ಲಿ ತೊಡಗಿದ ಮಹಿಳೆ

ಮಡಿಕೇರಿ, ಡಿ. 28– ಈ ಪುರುಷ ಪ್ರಧಾನ ಸಮಾಜದಲ್ಲಿ ಸಮಬಲಳಾಗಿ ನಿಲ್ಲುವಲ್ಲಿ ಇನ್ನೂ ಅಂಜಿಕಾಳಿಕ್ಕುತ್ತಿರುವ ಮಹಿಳೆ ಸಾರ್ವಜನಿಕ ರಂಗದಲ್ಲಿ ಕಾಣಿಸಿಕೊಳ್ಳುತ್ತಿರುವುದು ತೀರಾ ಅಪರೂಪ. ಅಂಥದ್ದರಲ್ಲಿ ಓರ್ವ ಮಹಿಳೆ, ಕೈಗಾರಿಕೆಯಲ್ಲಿ ತೊಡಗುವುದೆಂದರೆ, ಒಂದು ಸಾಹಸವೇ ಸರಿ. ಅದನ್ನು 'ಸಾಹಸಗಾಥೆ' ಅಂದರೂ ತಪ್ಪಿಲ್ಲ.

ಇಂಥ ಓರ್ವ ಮಹಿಳೆಯನ್ನು ಮಡಿಕೇರಿಯಲ್ಲಿ ಕಾಣಬಹುದು. ಈಕೆಯ ಹೆಸರು ಉಷಾ ಪಾಂಡುರಂಗ. ಅವರ ಪತಿ ಪಾಂಡುರಂಗ ಖಾಸಗಿ 'ಏಜೆನ್ಸಿ' ವ್ಯವಹಾರದಲ್ಲಿ ತೊಡಗಿದ್ದಾರೆ.

ಕಸೂತಿಯಲ್ಲಿ ತೀರಾ ಆಸಕ್ತಿಯಿದ್ದ ಉಷಾ ಸುಮಾರು ಒಂದು ವರ್ಷದ ಹಿಂದೆ ಕೈನಲ್ಲೇ ಒಂದು ಉಣ್ಣೆಯ ಕಾರ್ಪೆಟ್ ತಯಾರಿಸಿದರು. ಇತರ 'ರಗಳೆ' ಕೆಲಸಕ್ಕಿಂತ ಈ ಹವ್ಯಾಸವನ್ನೇ ತೀವ್ರ ಹಚ್ಚಿಕೊಂಡ, ಇದನ್ನೇ ಪ್ರೀತಿಸಿದ ಅವರು ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ತಾವು ತಯಾರಿಸಿದ ಕಾರ್ಪೆಟ್‌ನಲ್ಲಿ ಪ್ರದರ್ಶನಕ್ಕೆ ಇಟ್ಟರು. ಇದನ್ನು ಕಂಡ ಮಹಿಳೆಯೊಬ್ಬರು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಮೆಚ್ಚುಗೆ ಉಷಾ ಅವರಿಗೆ ಇನ್ನಷ್ಟು ಶಕ್ತಿ ನೀಡಿತು. "ಕೈಗಾರಿಕೆ ಸ್ಥಾಪಿಸಿ" ಅಂತ ಮೆಚ್ಚುಗೆ ವ್ಯಕ್ತಪಡಿಸಿದವರು ಸಲಹೆ ನೀಡಿದರು.

ಭವ್ಯ ಭವಿಷ್ಯದ ಕನಸಿನ ಲೋಕದಲ್ಲಿ ತೇಲಿದ ಉಷಾ ಮಡಿಕೇರಿಯಲ್ಲಿರುವ ಜಿಲ್ಲಾ ಕೈಗಾರಿಕಾ ಕೇಂದ್ರದ ಪ್ರಧಾನ ವ್ಯವಸ್ಥಾಪಕ ನಾಗರಾಜ್ ಅವರನ್ನು ಸಂಪರ್ಕಿಸಿದರು. ನಾಗರಾಜ್ ಸಲಹೆ ಕೊಟ್ಟರಲ್ಲದೆ "ಧೈರ್ಯ" ತುಂಬಿದರು.

ಈ ಮಧ್ಯೆ ಬಯಲುಕುಪ್ಪೆಯ ಟಿಬೇಟಿಯನ್ನರ ಶಿಬಿರದಲ್ಲಿ ಉಷಾ ಸಾಕಷ್ಟು ತರಬೇತಿ ಪಡೆದರು. ಉಣ್ಣೆಯ ಕಾರ್ಪೆಟ್ ತಯಾರಿಸುವ ಸಾಹಸಕ್ಕೆ ಕೈ ಹಾಕಿದರು.

ಇವರ ಈ ಕೈಗಾರಿಕೆಗಾಗಿ ಮಡಿಕೇರಿಯ ಕೈಗಾರಿಕಾ ಪ್ರದೇಶದಲ್ಲಿರುವ ಶೆಡ್ ಒಂದು ಮಂಜೂರಾಯಿತು. ಕೈಗಾರಿಕೆ ಸ್ಥಾಪನೆಗಾಗಿ ಮೈಸೂರು, ಬೆಂಗಳೂರು, ಅಂತ ತುಂಬಾ ಅಲೆದರು: ಹೋದಲ್ಲೆಲ್ಲ ಬಹುತೇಕ ಅಧಿಕಾರಿಗಳು ತಕ್ಷಣ ಮಾಡಿಕೊಡುವಂಥ ಕೆಲಸಗಳನ್ನು ತಡವಾಗಿ ಮಾಡಿಕೊಟ್ಟರು.

ಇಂಥದೊಂದು ಕೈಗಾರಿಕೆ ಮಡಿಕೇರಿಯ ಶೀತ ವಾತಾವರಣಕ್ಕೆ ಒಗ್ಗುವುದಿಲ್ಲವೆಂದು ಕೆಲವರು ಕೈಗಾರಿಕಾ ಇಲಾಖೆಗೆ ಬರೆದು ಉಷಾ ಅವರ ಧೈರ್ಯಗುಂದಿಸಿದರು. ಈ ಮಹಿಳೆ ಇಷ್ಟಾದರೂ ಎದೆಗುಂದಲಿಲ್ಲ.

ಕೈಗಾರಿಕೆಗಾಗಿ ಹಣ ಸಿಗುವ ಕಡೆಗಳಲ್ಲೆಲ್ಲ ಪ್ರಯತ್ನಿಸಿ ವಿಫಲರಾದರು. "ನೋಡಿ, ಕರಿಮಣಿ ಸರ ಇರುವ ತಾಳಿ ಬಿಟ್ಟು, ಇನ್ನೆಲ್ಲ ಆಭರಣಗಳನ್ನು ಹಣಕ್ಕಾಗಿ ಒತ್ತೆ ಇಟ್ಟೆ" ಅಂತ ಉಷಾ ನೋವಿನಿಂದ ಈ ವರದಿಗಾರರಲ್ಲಿ ಹೇಳಿಕೊಂಡರು. "ಆದ್ರೆ ನನಗೆ ಚಿನ್ನದ ಆಭರಣ ಹಾಕಿಕೊಂಡು ಮೆರೀಬೇಕೆಂಬ ಆಸೆ ಏನೂ ಇಲ್ಲ. ಸಮಯಕ್ಕೆ ಆಗುತ್ತೆ ಅಂತ ಇದನ್ನೆಲ್ಲ ಇಟ್ಕೊಂಡಿದ್ದೆ" ಅನ್ನುತ್ತಾರೆ ಉಷಾ.

ಅಲ್ಲಿ ಇಲ್ಲಿ ಕೂಡಿಸಿದ ಹಣ ಸೇರಿಸಿ ಜೈಪುರದಿಂದ ಕಚ್ಚಾ ವಸ್ತುಗಳನ್ನು ತಂದರು. ಶೆಡ್ ಮಂಜೂರಾಗಿದ್ದರೂ ಕೈಗೆ ಸಿಕ್ಕಿರಲಿಲ್ಲ. ತಂದ ಕಚ್ಚಾ ವಸ್ತುಗಳೆಲ್ಲ "ಹಾಳಾಗಿಬಿಟ್ಟರೆ" ಎನ್ನುವ ಹೆದರಿಕೆ ಉಷಾರನ್ನು ಕಾಡಿತು.

ಶೆಡ್ ನಿರ್ಮಿಸಿದ ಕಂಟ್ರಾಕ್ಟರ್ ತಮ್ಮ ವಶಕ್ಕೆ ಒಪ್ಪಿಸಿಲ್ಲ ಎನ್ನುವ ಕಾರಣದಿಂದ ಉಷಾ ಅವರಿಗೆ ಶೆಡ್ ಸಿಕ್ಕಲೇ ಇಲ್ಲ. ಒಂದು ಕಡೆ ಕಚ್ಚಾವಸ್ತು ಹಾಳಾದೀತಲ್ಲ ಎನ್ನುವ ಭಯ, ಸಮಯ ವ್ಯರ್ಥವಾಗುತ್ತಿದೆಯಲ್ಲ ಎನ್ನುವ ನೋವು ಇನ್ನೊಂದು ಕಡೆ. ಉಷಾ ಧೈರ್ಯ ಮಾಡಿ 'ಶೆಡ್' ಅನ್ನು ವಶಪಡಿಸಿಕೊಂಡರು.

ಪುರಸಭೆಗೆ ನೀರು ಪೂರೈಕೆಗೆ ಸಾಕಷ್ಟು ಬಾರಿ ಮನವಿ ಮಾಡಿಕೊಂಡರು. "ಪುರಸಭಾ ಪುಣ್ಯಾತ್ಮ"ರ ಮನಸ್ಸು ಕರಗಲಿಲ್ಲ, ಸಾಕಷ್ಟು ಆಟ ಆಡಿಸಿದರು. ಕೊನೆಗೆ ಆರು ತಿಂಗಳ ಮುಂಗಡ ನೀರಿನ ತೆರಿಗೆ ಕಟ್ಟಿಸಿಕೊಂಡು ನೀರಿನ ಲೈನ್ ದೊರಕಿಸಿಕೊಟ್ಟರು.

ಕಟ್ಟಡ ನಿರ್ಮಿಸಿದ ಕಂಟ್ರಾಕ್ಟರ್ ಈಗ ಎಲ್ಲಿರುವನೋ ಗೊತ್ತಿಲ್ಲ. ಈತನಿಲ್ಲದಿರುವುದೇ ಒಂದು ದೊಡ್ಡ ತಲೆ ನೋವಾಗಿದೆ. ಕೈಗಾರಿಕಾ ಕೇಂದ್ರದ ವಶಕ್ಕೆ ಒಪ್ಪಿಸದೆ ವಿದ್ಯುತ್ ಸಂಪರ್ಕ ಒದಗಿಸುವುದಿಲ್ಲ ಎಂದು ವಿದ್ಯುನ್ಮಂಡಳಿ ಸ್ಪಷ್ಟಪಡಿಸಿತು. ಹೀಗಾಗಿ ಇದುವರೆಗೂ ವಿದ್ಯುತ್ ಪೂರೈಕೆಯಾಗಲಿಲ್ಲ.

ಮೈಸೂರಿನಲ್ಲಿರುವ ಕೆ. ಎಸ್. ಎಫ್. ಸಿ. ಗೆ ಉಷಾ ಸಾಕಷ್ಟು ಬಾರಿ ಓಡಾಡಿದ್ದಾರೆ. ಕೈಗಾರಿಕೆಗೆ ಸಂಬಂಧಿಸಿದ ಅಧಿಕಾರಿಗಳೆಲ್ಲ ಒಳ್ಳೆಯವರು ಎನ್ನುವ ಉಷಾ ಕೆ.ಎಸ್. ಎಫ್. ಸಿ. ಯ 46 ಸಾಂಪ್ರದಾಯಿಕ ನಿಯಮಗಳು ಮಹಿಳಾ ಕೈಗಾರಿಕೋದ್ಯಮಿಗೆ ಬಹಳ ಕಿರಿಕಿರಿ ಉಂಟು ಮಾಡುತ್ತದೆ ಎನ್ನುತ್ತಾರೆ.

ಮಹಿಳಾ ಕೈಗಾರಿಕೋದ್ಯಮಿಗೆ "ಸಮಯಕ್ಕೆ ತಕ್ಕ ಸಹಾಯ" ಸಿಕ್ಕರೆ ಮಾತ್ರ ಕೈಗಾರಿಕೆಯ ಉಳಿವು ಸಾಧ್ಯ ಎಂದು ಉಷಾ ತಮ್ಮ ಅಳಲನ್ನು ತೋಡಿಕೊಂಡರು.

ಕಾಲ ಬದಲಾದಂತೆ ಇದಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ನಿಯಮಗಳು (ಮಹಿಳೆಯರಿಗೆ ನಿಯಮಗಳನ್ನು ಸ್ವಲ್ಪ ಸಡಿಲಿಸಿ) ಬದಲಾಗಬೇಕೆನ್ನುವುದು ಅವರ ಆಶಯ.

ಸಸ್ಪೆಂಡ್

ಮೈಸೂರು, ಡಿ. 28 – ಮತಗಟ್ಟೆಗೆ ಶಾಲೆಯನ್ನು ಬಿಟ್ಟು ಕೊಡಲು ನಿರಾಕರಿಸಿದ ಶಾಲಾ ಮುಖ್ಯೋಪಾಧ್ಯಾಯರೊಬ್ಬರನ್ನು ಸಸ್ಪೆಂಡ್ ಮಾಡಲಾಗಿದೆ.

ಜಿಲ್ಲಾಧಿಕಾರಿ ವಿನಯಕುಮಾರ್ ಅವರು ಈ ಸಸ್ಪೆನ್ಷನ್ ಆಜ್ಞೆ ಹೊರಡಿಸಿದ್ದಾರೆ.

ಸಸ್ಪೆಂಡ್ ಆಗಿರುವವರು ರಕ್ಷಪುರಿ ಕೋಟೆ ಕಾಲನಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಮಹಮದ್ ಖಾಸಿಂ ಅವರು.

ಮತದಾನಕ್ಕೆ ಶಾಲೆಯನ್ನು ಬಿಟ್ಟುಕೊಡಲು ಒಪ್ಪದ ಖಾಸಿಂ ಅವರು ಈ ಶಾಲಾ ಕಟ್ಟಡದಲ್ಲಿ ಇಡಬೇಕೆಂದು ಸೂಚಿತವಾದ ಎರಡು ಮತಗಟ್ಟೆಗಳಿಗೆ ಅಗತ್ಯವಾದ ಪೀಠೋಪಕರಣಗಳನ್ನು ನೀಡಲೂ ಸಮ್ಮತಿಸಲಿಲ್ಲವೆಂಬ ಕಾರಣಕ್ಕಾಗಿ ಅವರನ್ನು ಸಸ್ಪೆಂಡ್ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿಯ ಅಧಿಕೃತ ಪ್ರಕಟಣೆ ತಿಳಿಸಿದೆ.

ರೂ. 4000/- ಗೆಲ್ಲಿರಿ:-200/- ರೂಪಾಯಿಗಳ 20 ಕಂತುಗಳಲ್ಲಿ ಚಿನ್ನದ ಒಡವೆಗಳನ್ನು ಗೆಲ್ಲಿರಿ. ಗೆದ್ದವರು ಕಂತು ಕಟ್ಟಬೇಕಾಗಿಲ್ಲ. ಇಂದೇ ಸದಸ್ಯರಾಗಿರಿ. ರೂ. 10/- 20/- 30/- 40/- 50/- 100/- ರ ಸುಲಭಕಂತುಗಳ ಸೌಲಭ್ಯವಿದೆ. ಗೀತಾ ಜ್ಯುವೆಲ್ಲರ್ಸ್: ವುಡ್‌ಸ್ಯಾಡ್ ಬಿಲ್ಡಿಂಗ್: ಕೆ. ಎಸ್. ಆರ್. ರೋಡ್, ಮಂಗಳೂರು-575001.

ಉಡುಪಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ

ಓ. ಎಂಡ್ ಎಸ್. ಸಿ. ನಂಬ್ರ 4/1984

ಅರ್ಜಿದಾರರು

1) ಶ್ರೀಮತಿ ಕರುಣಾ ಪಿ ಕಾಮತ್
2) ಕುಮಾರಿ ಅನುರಾಧಾ ಕಾಮತ್
3) ಮಾಸ್ಟರ್ ಅಶೋಕ್ ಕಾಮತ್

— ನಂಬ್ರ 3ನೇಯವನು ಅಪ್ರಾಯಸ್ಥ ತನ್ನ ತಾಯಿ 1ನೇ ಅರ್ಜಿದಾರಳಿಂದ ಪ್ರತಿನಿಧಿಸಲ್ಪಡುವವನು.

— 1ನೇಯವರು ಕಟಪಾಡಿ ಅನಂತ ಕಾಮತರ ವಿಧವೆ ವ 2 ಮತ್ತು 3ನೇಯವರು ಅವರ ಮಕ್ಕಳು.

— ಎಲ್ಲರೂ ಕಾನ್ವೆಂಟ್ ರಸ್ತೆ ಉಡುಪಿ ಕಸಬಾ.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ ತಾರೀಕು 5-1-1984 ರಂದು ಮೃತಪಟ್ಟ ಕಟಪಾಡಿ ಪಾಂಡುರಂಗ ಅನಂತ ಕಾಮತರ ವಾರೀಸುದಾರರು ತಾವು ಎಂದು ಸಾಧಿಸಿ, ಅವರಿಗೆ ಬರಲಿದ್ದ ಬ್ಯಾಂಕಿನ ಬಾಬ್ತು ವಾರೀಸು ಸರ್ಟಿಫಿಕೇಟನ್ನು ಕೊಡಬೇಕಾಗಿ ಕೇಳಿಕೊಂಡು ಅರ್ಜಿದಾರರು ಮಾಡಿದ ಮೇಲ್ಕಾಣಿಸಿದ ವ್ಯವಹರಣೆಯು ತಾರೀಕು 22-2-1985ಕ್ಕೆ ಇಟ್ಟಿರುತ್ತದೆ. ಆಕ್ಷೇಪಣೆ ಉಳ್ಳವರು ಸದ್ರಿ ದಿವಸ ಬೆಳಿಗ್ಗೆ ಗಂಟೆ 11-00ಕ್ಕೆ ನ್ಯಾಯಾಲಯದಲ್ಲಿ ಹಾಜರಾಗಿ ದಾಖಲು ಪಡಿಸಿಕೊಳ್ಳಬಹುದು.

—ನ್ಯಾಯಾಲಯದ ಆದೇಶದ ಮೇರೆಗೆ

ಪಿ. ಬಾಲಕೃಷ್ಣ ಆರ್ ಶೆಟ್ಟಿ
ಪಿ. ಹಿರಾ ಶೆಟ್ಟಿ

ಅರ್ಜಿದಾರರ ಕಡೆ ನ್ಯಾಯವಾದಿಗಳು

ಉಡುಪಿ ದ. ಕ.

26-12-1984

ಜೊಯ್ಡಾ ತಾಲೂಕು ಎಂಬ ಹೆಸರಿನ "ಅವ್ಯವಸ್ಥೆಗಳ ಅಕ್ಷಯ ಪಾತ್ರೆ"

ಕಾರವಾರ, ಡಿ. 28– ಕಾಳಿಯೋಜನೆ ಸುಪಾ ತಾಲೂಕನ್ನು ನುಂಗಿದಾಗ ಜೊಯ್ಡಾ ಎಂಬ ತಾಲೂಕು ತಲೆ ಎತ್ತಿರುವುದು ಬಹಳ ಮಂದಿಗೆ ಗೊತ್ತಿಲ್ಲ. ಸರ್ಕಾರದ ನಿರ್ಲಕ್ಷ್ಯ ಧೋರಣೆಗೆ ಸ್ಪಷ್ಟ ಉದಾಹರಣೆಯಾಗಿರುವ ಈ ತಾಲೂಕು "ಅವ್ಯವಸ್ಥೆಗಳ ಅಕ್ಷಯ ಪಾತ್ರೆ" ಯಂತಿದೆ.

30,000ಕ್ಕೂ ಹೆಚ್ಚಿನ ಜನಸಂಖ್ಯೆ ಇರುವ ಈ ತಾಲೂಕು ಈಗ ಅನಾಥ ಶಿಶುವಿನಂತೆ ಗೋಳಿಡುತ್ತಿದೆ. ಕುಣಬಿ ಎಂಬ ಹಿಂದುಳಿದ ಜನಾಂಗವೊಂದು ಎಲ್ಲ ನಾಗರೀಕತೆಯಿಂದ ಹಿಂದೆ ಸರಿದು ದಟ್ಟ ಕಾಡಿನ ನಡುವೆ ಅವಿತು ಕೊಂಡಿದೆ. ಈ ಜನಾಂಗದ ಮಂದಿಗೆ ಚುನಾವಣೆಯಾಗಲೀ, ರಾಜಕೀಯ ಪಕ್ಷಗಳಾಗಲೀ, ಸರ್ಕಾರವಾಗಲೀ, ಏನೆಂದು ಗೊತ್ತಿಲ್ಲ.

ಇಲ್ಲಿನ ಸರ್ಕಾರಿ ಕಚೇರಿಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಸಿಬ್ಬಂದಿಗಳಿಲ್ಲ. ಹೀಗಾಗಿ ಯಾವುದೇ ಕೆಲಸ ತ್ವರಿತಗತಿಯಲ್ಲಿ ಸಾಗುತ್ತಿಲ್ಲ.

ಇಲ್ಲಿನ ಕ್ಷೇತ್ರಾಭಿವೃದ್ಧಿ ಕಚೇರಿಯಲ್ಲಿ ಒಬ್ಬ ಅಧಿಕಾರಿ, ಇಬ್ಬರು ನೌಕರರು ಮಾತ್ರ ಇದ್ದಾರೆ. ಹೀಗಾಗಿ ಕೆಲಸದ ಗತಿ ಬಹಳ ನಿಧಾನ. ಈ ಕಚೇರಿಗೆ ವರ್ಗವಾಗಿ ಬಂದವರು ಯಾರ್ಯಾರದೋ ಪ್ರಭಾವ ಬೀರಿ ಬೇರೆಡೆಗೆ ವರ್ಗ ಮಾಡಿಸಿಕೊಳ್ಳುತ್ತಾರೆ.

ತಾಲೂಕು ಕಚೇರಿಯಲ್ಲಿ ಮಾತ್ರ ಹಣಕ್ಕೆ ಸಂಬಂಧಿಸಿದ ಫೈಲ್ ಇರುತ್ತದೆ. ಆದರೆ ಹಣ ವಿನಿಯೋಗ ಯಾವ ರೀತಿಯಲ್ಲಿ ಆಗುತ್ತಿದೆ ಎನ್ನುವ ವಿಷಯ ಯಾರಿಗೂ ಗೊತ್ತಿಲ್ಲ.

ವಸತಿ ರಹಿತ ಬಡವರಿಗೆ 300ಕ್ಕೂ ಹೆಚ್ಚು ಮನೆಗಳಿಗೆ ಹಣ ಮಂಜೂರಾಗಿದೆ ಆದರೆ ಈ ಬಗ್ಗೆ ಕೇಳಿದರೆ ಮಾಹಿತಿ ಕೊಡುವವರಿಲ್ಲ. ಬಹುತೇಕ ಸರ್ಕಾರಿ ನೌಕರರಿಗೆ ವಸತಿ ಸೌಲಭ್ಯ ಇಲ್ಲದ್ದರಿಂದ ಇಲ್ಲಿಂದ 30ಕಿ. ಮಿ. ದೂರದಲ್ಲಿರುವ ದಾಂಡೇಲಿಗೆ ಹೋಗಿ ಬರುತ್ತಾರೆ.

1981 ನೇ ಸಾಲಿನಲ್ಲಿ ನೌಕರರ ವಸತಿಗಾಗಿ 6.5 ಲಕ್ಷ ರೂ. ಬಿಡುಗಡೆಯಾಗಿದೆ. ಆದರೆ ಆರ್. ಡಿ. ಸಿ. ಸೆಕ್ಷನ್ ಕಾರ್ಯದರ್ಶಿಯ ಬಳಿಯಲ್ಲಿ ಈ ಫೈಲ್ ನಿದ್ರಿಸುತ್ತಿದೆ. ಹೀಗಾಗಿ ಕೆಲಸ ಮುಂದುವರಿದಿಲ್ಲ.

ಇಲ್ಲಿರುವ ಬ್ಯಾಂಕ್‌ಗಳೂ ಜನರೊಂದಿಗೆ ಸರಿಯಾಗಿ ವರ್ತಿಸುತ್ತಿಲ್ಲ ಎನ್ನುವ ಆಪಾದನೆಯೂ ಇದೆ.

ಕ್ಷೇತ್ರಾಭಿವೃದ್ಧಿ ಕಚೇರಿಗೆ ಇಬ್ಬರು ಜೂನಿಯರ್ ಇಂಜಿನಿಯರ್, ಒಬ್ಬ ಮೊದಲನೇ ದರ್ಜೆ ಗುಮಾಸ್ತ, ಇಬ್ಬರು ಎರಡನೇ ದರ್ಜೆ ಗುಮಾಸ್ತರು, ಓರ್ವ ಅಭಿವೃದ್ಧಿ ಸಹಾಯಕರು, ಇಬ್ಬರು ಗ್ರಾಮ ಸೇವಕರು ಒಬ್ಬ ಗ್ರಾಮ ಸೇವಕಿಯ ಅಗತ್ಯವಿದೆ.

ಇಲ್ಲಿ ಎಲ್ಲಿ ಹುಡುಕಿದರೂ ಪಶು ವೈದ್ಯರು ಕಾಣ ಸಿಗುವುದಿಲ್ಲ. ಇದರಿಂದಾಗಿ ದನಗಳು ಸಾಯುವ ಹೊರತು ಬೇರೆ ಪರಿಹಾರವಿಲ್ಲ.

4,000 ಜನಸಂಖ್ಯೆ ಇರುವ ಗುಂದಾ ಎಂಬ ಗ್ರಾಮಕ್ಕೆ ಬಸ್ ವ್ಯವಸ್ಥೆ ಇಲ್ಲ. ಅಡಿಕೆ ತೋಟಗಳು ಹೆಚ್ಚಾಗಿ ಇರುವ ಈ ಗ್ರಾಮಕ್ಕೆ ಬಸ್ ಸೌಕರ್ಯ ತೀರಾ ಅನಿವಾರ್ಯ.

ಈ ಎಲ್ಲ ಸಮಸ್ಯೆಗಳತ್ತ ಸರ್ಕಾರ ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆನ್ನುವುದು ಇಲ್ಲಿನ ಎಲ್ಲರ ಆಶಯ.

ಕಾಂಗ್ರೆಸಿನಿಂದ ಸಸ್ಪೆಂಡ್

ಶಿರಸಿ, ಡಿ. 28–ಪಕ್ಷ ವಿರೋಧಿ ಚಟುವಟಿಕೆಗಳಿಗಾಗಿ ಇಲ್ಲಿನ ಎಸ್. ಪಿ. ರೇವಣಕರ, ಕುಮಟಾದ ಬಿ. ಎಂ. ಮಲ್ಲಿಕ್, ಸಿದ್ದಾಪುರದ ಮಹಬೂಬ್ ಅಲಿ ಮತ್ತು ಮುಂಡಗೋಡದ ಎಚ್. ಎಮ್. ನಾಯ್ಕ ಇವರುಗಳನ್ನು ಕಾಂಗ್ರೆಸ್ ಪಕ್ಷದಿಂದ ಸಸ್ಪೆಂಡ್ ಮಾಡಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಎಸ್. ಆರ್. ಹೆಗಡೆ ತಿಳಿಸಿದ್ದಾರೆ.

ಅಖಿಲಕರ್ನಾಟಕ ನಾಟಕ ಸ್ಪರ್ಧೆ

ಜೋಗ್‌ಫಾಲ್ಸ್, ಡಿ. 28–ಇಲ್ಲಿನ ಮಿತ್ರ ಮಂಡಳಿ ಆಶ್ರಯದಲ್ಲಿ ಫೆಬ್ರವರಿ ಮೊದಲ ವಾರದಲ್ಲಿ ಅಖಿಲ ಕರ್ನಾಟಕ ನಾಟಕ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಸ್ಪರ್ಧೆಯಲ್ಲಿ ಪೌರಾಣಿಕ, ಸಾಮಾಜಿಕ, ಜಾನಪದ, ಅಸಂಗತ ಮತ್ತು ಪ್ರಯೋಗಾತ್ಮಕ ಕನ್ನಡ ನಾಟಕಗಳನ್ನು ಪ್ರದರ್ಶಿಸಬಹುದು.

ಸ್ಪರ್ಧೆಯ ಶ್ರೇಷ್ಠ ನಾಟಕಕ್ಕೆ 1,000 ರೂ. ನಗದು ಬಹುಮಾನ ಮತ್ತು ಪ್ರತಿಯೊಂದು ವಿಭಾಗದ ನಾಟಕಗಳಿಗೂ ಬಹುಮಾನ ನೀಡಲಾಗುವುದು.

ಪ್ರವೇಶ ಪತ್ರವನ್ನು ಜನವರಿ 10 ರ ಒಳಗೆ ಗೌರವ ಕಾರ್ಯದರ್ಶಿ, ಮಿತ್ರ ಮಂಡಳಿ, ಜೋಗ್‌ಫಾಲ್ಸ್ ಇವರಿಗೆ ಕಳಿಸುವಂತೆ ಕೋರಲಾಗಿದೆ.

ಚುನಾವಣಾ ಘರ್ಷಣೆ ಒಂದು ಸಾವು

ಶಿವಮೊಗ್ಗ, ಡಿ. 28– ಡಿಸೆಂಬರ್ 24ರಂದು ನಡೆದ ಚುನಾವಣೆಯಲ್ಲಿ ಹೊನ್ನಾಳಿ ತಾಲೂಕಿನ ಜೀನಹಳ್ಳಿಯ ಮತದಾನ ಪೆಟ್ಟಿಗೆಯ ಬಳಿ ಬದಲಿ ಮತದಾನ ಮಾಡುವ ವಿವಾದದಲ್ಲಿ ಎರಡು ಗುಂಪುಗಳ ನಡುವೆ ನಡೆದ ಘರ್ಷಣೆಯಿಂದ ಒಬ್ಬ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿದ್ದು ಇತರ ಇಬ್ಬರು ತೀವ್ರ ಗಾಯಗೊಂಡಿದ್ದಾರೆಂದು ತಿಳಿದು ಬಂದಿದೆ.

ಈ ಘಟನೆಗೆ ಸಂಬಂಧಿಸಿದಂತೆ ತಾಲೂಕು ಮ್ಯಾಜಿಸ್ಟ್ರೇಟ್ ಅವರು ಜನವರಿ 1ರ ತನಕ ನಿಷೇದಾಜ್ಞೆಯನ್ನು ಜಾರಿಗೊಳಿಸಿದ್ದಾರೆ.

ಮಾಜಿ ಶಾಸಕ ಎಚ್. ಬಿ. ಕಾಡಸಿದ್ದಪ್ಪ ಮತ್ತು ತಾಲೂಕು ಕಾಂಗ್ರೆಸ್ ಮುಖಂಡ ಕರಿಯಪ್ಪ ಅವರುಗಳು ಒಂದು ಸಂಯುಕ್ತ ಹೇಳಿಕೆ ನೀಡಿ ಈ ಘಟನೆಯ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸುವಂತೆ ಸರಕಾರವನ್ನು ಒತ್ತಾಯಿಸಿದ್ದಾರೆ.

ಕೊಲೆ ಆರೋಪಿ ಪರಾರಿ

ಪೆರಡಾಲ, ಡಿ. 28–ಕುಂಬಳೆ ಸಮೀಪದ ಮಣ್ಣಂಕುಯಿರಲ್ಲಿ ಕಳೆದ ವರ್ಷ ವೃದ್ಧೆಯೊಬ್ಬಳನ್ನು ಕೊಲೆ ಮಾಡಿದ ಆರೋಪಿಯೊಬ್ಬ ಪೊಲೀಸರ ವಶದಿಂದ ತಪ್ಪಿಸಿಕೊಂಡಿದ್ದಾನೆ.

ಕೈಜಮ್ಮ (80) ಎಂಬಾಕೆಯನ್ನು ಕೊಲೆ ಮಾಡಿದ್ದ ವಿಜಯನ್ (30)ಎಂಬಾತನಿಗೆ ತಲಚೇರಿಯ ಅಡಿಶನಲ್ ನ್ಯಾಯಾಧೀಶ ಕೆ.ಎ.ಮಹಮ್ಮದ್ ಷಫಿ ಅವರು ಜೀವಾವಧಿ ಶಿಕ್ಷೆ ವಿಧಿಸಿದ ನಂತರ ಆರೋಪಿ ಪೊಲೀಸರ ವಶದಿಂದ ತಪ್ಪಿಸಿಕೊಂಡು ಪರಾರಿಯಾದನೆಂದು ವರದಿಯಾಗಿದೆ.

ಆರೋಪಿಗಳಾದ ವಿಜಯನ್ ಮತ್ತು ಸಾರಾಬಿ ಇಬ್ಬರೂ ಕೊಲೆಯಾದ ವೃದ್ಧೆಯಿಂದ ಚಿನ್ನಾಭರಣಗಳನ್ನು ಅಪಹರಿಸಿದ್ದರು.

ಆಭರಣ ವಶ ಕಳ್ಳನ ಬಂಧನ

ಪೆರಡಾಲ, ಡಿ. 28– ಅನೇಕ ಕಡೆಗಳಲ್ಲಿ ಚಿನ್ನಾಭರಣ ಕಳ್ಳತನ ಮಾಡಿ ತಲೆ ತಪ್ಪಿಸಿಕೊಂಡಿದ್ದ ವಿಜಯ ಕುಮಾರ್ (27) ಎಂಬಾತನನ್ನು ಕಾಸರಗೋಡು ಪೊಲೀಸರು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ಈತನಿಂದ ಆಭರಣಗಳನ್ನು ವಶಪಡಿಸಿಕೊಂಡಿರುವ ಪೊಲೀಸರು ಈತ ಅಪಸ್ಮಾರ ರೋಗಿಯಂತೆ ನಟಿಸಿ ತಪ್ಪಿಸಿಕೊಂಡಿದ್ದನೆಂದು ಹೇಳಿದ್ದಾರೆ.

ಪ್ರಥಮ ಬಾರಿಗೆ ಮತ ಚಲಾಯಿಸಿದವರು

ಶಿವಮೊಗ್ಗ, ಡಿ. 28–ಸ್ವಾತಂತ್ರ್ಯದ ನಂತರ ಪ್ರಥಮಬಾರಿಗೆ ಸುಮಾರು 1500 ಆಲೆಮಾರಿಗಳು 'ಮತ' ಚಲಾಯಿಸಿರುವುದಾಗಿ ತಡವಾಗಿ ಇಲ್ಲಿಗೆ ಬಂದಿರುವ ವರದಿಗಳು ತಿಳಿಸಿವೆ.

ಶಿವಮೊಗ್ಗ ಲೋಕಸಭಾ ಕ್ಷೇತ್ರದ ಚಿಕ್ಕಜಾಮರಡಿ ಹಳ್ಳಿಯಲ್ಲಿ ನೆಲಸಿ ವಾಸಿಸುತ್ತಿರುವ ಇವರು ತಮ್ಮ ಹೆಸರನ್ನು ಚುನಾವಣೆ ಪಟ್ಟಿಯಲ್ಲಿ ಸೇರಿಸಿ ಮತದಾನದ ಹಕ್ಕನ್ನು ನೀಡಿದ ಸರ್ಕಾರವನ್ನು ವಂದಿಸಿದ್ದಾರೆ.

ಇವರಿಗಾಗಿಯೇ ಪ್ರತ್ಯೇಕ ಮತಗಟ್ಟೆಯೊಂದನ್ನು ಆ ಸ್ಥಳದಲ್ಲೇ ವ್ಯವಸ್ಥೆ ಮಾಡಲಾಗಿತ್ತು.

ರೈತರ ಅಭಿವೃದ್ಧಿಗೆ ಆರ್ಥಿಕ ಸಂಪನ್ಮೂಲ

ಚಿಕ್ಕಮಗಳೂರು, ಡಿ. 28 – ಈಗ ಲಭ್ಯವಿರುವ ಆರ್ಥಿಕ ಸಂಪನ್ಮೂಲದ ಹೆಚ್ಚು ಭಾಗವನ್ನು ರೈತರ ಅಭಿವೃದ್ಧಿಗಾಗಿ ವಿನಿಯೋಗಿಸಲು ಜನತಾ ಸರ್ಕಾರ ಬದ್ಧವಾಗಿದೆ ಎಂದು ರಾಜ್ಯ ಪಶುಸಂಗೋಪನಾ ಸಚಿವ ಎಚ್. ಎ. ನಾರಾಯಣ ಗೌಡ ಅವರು ತಿಳಿಸಿದರು.

ಇತ್ತೀಚೆಗೆ ಶೃಂಗೇರಿಯಲ್ಲಿ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ವಿಸ್ತರಣಾ ಕಟ್ಟಡವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ಸರ್ಕಾರದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಸಂದರ್ಭದಲ್ಲಿ ಜನರಿಗೆ ತಪ್ಪು ಮಾಹಿತಿ ನೀಡದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕೆಂದು ತಿಳಿಸಿದರು.

ಕಳೆದ ನಾಲ್ಕು ವರ್ಷಗಳಲ್ಲಿ ಶೃಂಗೇರಿ ತಾಲೂಕು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ 52 ಲಕ್ಷ ರೂ.ಗಳ ಲಾಭ ಗಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷ ಡಾ॥ ಎಚ್. ಮಂಜಪ್ಪ ಗೌಡ ಅವರು ತಿಳಿಸಿದರು.

ಸರ್ಕಾರ ಘೋಷಿತ ಬಡ್ಡಿ ರಿಯಾಯ್ತಿ ಮೇರೆಗೆ ಈ ಬ್ಯಾಂಕು ಕಳೆದ ಎರಡು ವರ್ಷಗಳಲ್ಲಿ ಸುಮಾರು ನಾಲ್ಕು ಲಕ್ಷದ 36 ಸಾವಿರ ರೂ.ಗಳ ರಿಯಾಯ್ತಿ ನೀಡಿದೆ ಎಂದು ಶಾಸಕ ಗೋವಿಂದೇಗೌಡ ಅವರು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಅನ್ವಯ 48 ಜನ ಫಲಾನುಭವಿ (ಪ್ರಯೋಜನದಾರರಿಗೆ) 62 ಸಾವಿರ ಸಹಾಯಧನ ಒದಗಿಸಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ 44 ಜನ ರೈತರಿಗೆ 3,24 ಲಕ್ಷ ರೂ.ಗಳ ಸಾಲ ವಿತರಣೆ ಮಾಡಲಾಯಿತು.

ನೇಮಕ

ಚಿಕ್ಕಮಗಳೂರು, ಡಿ. 28– ಜಿಲ್ಲಾ ಪಕ್ಷದ ಕಾರ್ಯದರ್ಶಿ ಆಗಿ ತರೀಕೆರೆಯ ಮಾಜಿ ಪುರಸಭಾಧ್ಯಕ್ಷ ಟಿ. ಎಚ್. ಲಕ್ಷ್ಮಣ್ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷ ಹಾಗೂ ರಾಜ್ಯ ಪಶು ಸಂಗೋಪನಾ ಸಚಿವ ಎಚ್. ಎನ್. ನಾರಾಯಣ ಗೌಡ ಅವರು ಇತ್ತೀಚೆಗೆ ತಿಳಿಸಿದರು.

ತರೀಕೆರೆ ಜನತಾ ನಾಗರೀಕ ಸಮಿತಿ ಅಧ್ಯಕ್ಷರನ್ನಾಗಿ ಇಲ್ಲಿನ ಪುರಸಭಾಧ್ಯಕ್ಷ ಟಿ. ಎನ್ ಗೋಪಿನಾಥ್ ಅವರನ್ನು ನೇಮಕ ಮಾಡಲಾಗಿದೆ ಎಂದು ಅವರು ತಿಳಿಸಿದರು.

ನಾಗರಿಕರ ದೂರು

ಗೋಕಾಕ್, ಡಿ.28–ಕುಡಿಯುವ ನೀರಿನ ಅಭಾವ ನೀಗಿಸಲು ಪುರಸಭೆಯವರು ಟ್ಯಾಂಕರ್ ಮೂಲಕ ಸರಬರಾಜು ಮಾಡುತ್ತಿರುವ ನೀರು, ಜನ ಸಾಮಾನ್ಯರಿಗೆ ಸಿಗುತ್ತಿಲ್ಲವೆಂದು ಇಲ್ಲಿನ ನಾಗರಿಕರು ದೂರಿದ್ದಾರೆ.

ಟ್ಯಾಂಕರ್ ಮೂಲಕ ವಿತರಣೆ ಮಾಡಲಾಗುತ್ತಿರುವ ನೀರನ್ನು ಪ್ರತಿಷ್ಠಿತರ ಮನೆಗಳಿಗೆ ಮಾತ್ರ ಒದಗಿಸಲಾಗುತ್ತಿದೆ ಎಂಬುದು ಅವರ ದೂರು.

ಕುಡಿಯುವ ನೀರಿನ ಪರಿಸ್ಥಿತಿಯನ್ನು ಶೀಘ್ರವೇ ಪರಿಹರಿಸಬೇಕೆಂದು ಒತ್ತಾಯಿಸಿರುವ ನಾಗರಿಕರು ಆ ಕಾರ್ಯದಲ್ಲಿ ವಿಫಲವಾದರೆ ಪುರಸಭೆ ಸದಸ್ಯರು ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದ್ದಾರೆ.

ನೌಕರರ ಸಂಘ

ಚಿಕ್ಕಮಗಳೂರು, ಡಿ. 28– ಇಲ್ಲಿನ ಕರ್ನಾಟಕ ವಿದ್ಯುನ್ಮಂಡಳಿಯ ನೌಕರರ ಸಂಘದ ವಾರ್ಷಿಕ ಸಭೆಯು ಇತ್ತೀಚೆಗೆ ನಡೆದು ಜೆ. ಕೆ. ಕರಿಯಯ್ಯ (ಅಧ್ಯಕ್ಷ), ಈಶ್ವರಪ್ಪ (ಉಪಾಧ್ಯಕ್ಷ), ಎಸ್. ಪಿ. ಸ್ವಾಮಿಗೌಡ (ಕಾರ್ಯದರ್ಶಿ), ಸಿಂಗಪ್ಪ (ಸಹಕಾರ್ಯದರ್ಶಿ), ಹಾಗೂ ಎಚ್. ಬಿ. ಧರ್ಮಪ್ಪ, ಕೆ. ಎಸ್. ನಾಗರಾಜಯ್ಯ, ಎಚ್. ಎ. ಅಪ್ಪು ಮತ್ತು ಪ್ರಭಾಕರ್ ಅವರು ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಆಯ್ಕೆಯಲ್ಲಿ ಭ್ರಷ್ಟಾಚಾರ ತಡೆಗೆ ಹೊಸ ಪದ್ಧತಿ

ಬೆಂಗಳೂರು, ಡಿ. 28 – ಪ್ರಾಥಮಿಕ ಶಾಲಾ ಶಿಕ್ಷಕರ ಆಯ್ಕೆಯಲ್ಲಿ ಭ್ರಷ್ಟಾಚಾರವನ್ನು ತಡೆಗಟ್ಟಲು ನೂತನ ಮಾದರಿ ಆಯ್ಕೆ ಪದ್ಧತಿಯನ್ನು ಜಾರಿಗೆ ತರಲಾಗಿದೆ ಎಂದು ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ಖಾತೆಯ ರಾಜ್ಯ ಸಚಿವ ಬಿ. ಸೋಮಶೇಖರ್ ತಿಳಿಸಿದರು.

ಈ ಹೊಸ ಪದ್ಧತಿಯ ಪ್ರಕಾರ ಜಿಲ್ಲಾ ನೇಮಕ ಸಮಿತಿಯು ಒಟ್ಟು 10 ಮಂದಿ ಸದಸ್ಯರಲ್ಲಿ ಐವರು ಅಧಿಕಾರಿಗಳು ಮತ್ತು ಐವರು ಅಧಿಕಾರೇತರರು ಇರುತ್ತಾರೆ.

ಇದರ ನಿಯಮದ ಪ್ರಕಾರ 26 ವರ್ಷ ತುಂಬಿದ ಎಲ್ಲಾ ಅಭ್ಯರ್ಥಿಗಳಿಗೆ ಅವರ ಅಂಕಗಳ ಆಧಾರದ ಮೇಲೆ ಆಯ್ಕೆಮಾತ್ರ ಆಗುವುದು.

ಕೆಲವು ಕಡೆ ಸಂದರ್ಶನ ಈಗಾಗಲೇ ಆರಂಭವಾಗಿದೆ.

ಕಾಸರಗೋಡಿನಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯ

ಪೆರಡಾಲ, ಡಿ. 28– ಎಲ್ಲ ಸಾರ್ವಜನಿಕ ಕಾರ್ಯಗಳಲ್ಲಿ ಕನ್ನಡಕ್ಕೆ ತಕ್ಕ ಮನ್ನಣೆ ನೀಡಬೇಕೆಂದು ಜಿಲ್ಲಾಧಿಕಾರಿ ಕೆ. ನಾರಾಯಣ ಅವರು ಸರ್ಕಾರಿ ಸಂಸ್ಥೆಗಳಲ್ಲಿ ಕೋರಿಕೊಂಡಿದ್ದಾರೆ.

ಕಾಸರಗೋಡು ತಾಲೂಕನ್ನು ಕನ್ನಡ ಮಾತನಾಡುವ ಪ್ರದೇಶವೆಂದು ಕೇರಳ ಘೋಷಿಸಿದ್ದರಿಂದ ಈ ರೀತಿ ಕೋರಿಕೊಳ್ಳಲಾಗಿದೆ.

ಸರ್ಕಾರಿ ಕಚೇರಿಗಳೊಂದಿಗೆ ಕನ್ನಡ ಭಾಷೆಯಲ್ಲಿಯೂ ವ್ಯವಹರಿಸುವ ಸೌಲಭ್ಯ ಕಲ್ಪಿಸಬೇಕೆಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಪೊಲೀಸರಿಗೆ ಶರಣಾದ ಆರೋಪಿ

ಮೂಡಿಗೆರೆ, ಡಿ. 28– ಇಲ್ಲಿಗೆ ಸಮೀಪದ ಆಲೂರಿನಲ್ಲಿ ಕಳೆದ ಆರು ತಿಂಗಳ ಹಿಂದೆ ಗುಂಡು ಹಾರಿಸಿ ಪೊಲೀಸರೊಬ್ಬನನ್ನು ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ನಂಜಪ್ಪ ಎಂಬುವವರು ಇತ್ತೀಚೆಗೆ ಪೊಲೀಸರಿಗೆ ಶರಣಾಗಿದ್ದಾರೆ.

ಗುಂಪು ಘರ್ಷಣೆ

ಚಿಕ್ಕಮಗಳೂರು ಡಿ. 28– ಇಲ್ಲಿಗೆ ಸಮೀಪವಿರುವ ತಿರುಗುಣ ಗ್ರಾಮದಲ್ಲಿ ಇತ್ತೀಚೆಗೆ ಸಂಭವಿಸಿದ ಗುಂಪು ಘರ್ಷಣೆಯಲ್ಲಿ ತೀವ್ರ ಗಾಯಗೊಂಡ ಗಂಗೇಗೌಡ ಎಂಬವರನ್ನು ಇಲ್ಲಿನ ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಗಿದೆ.

ಭೂವಿವಾದವೇ ಈ ಘರ್ಷಣೆಗೆ ಕಾರಣ ಎಂದು ತಿಳಿದು ಬಂದಿದೆ.

ಚಕ್ಕೆ ಕಳ್ಳಸಾಗಾಣಿಕೆ

ವಿರಾಜಪೇಟೆ, ಡಿ. 28– ಅರಣ್ಯ ಇಲಾಖೆಯ ನೌಕರರ ಬೆಂಬಲದೊಂದಿಗೆ ಇಲ್ಲಿನ ಸುತ್ತಮುತ್ತಲಿನ ಅರಣ್ಯಗಳಲ್ಲಿ ಬೆಟ್ಟುನಾ ಮರಗಳ ಚಕ್ಕೆಗಳು ಮೈಸೂರಿನ ಅಗರಬತ್ತಿ ಕಾರ್ಖಾನೆಗೆ ಸಾಗಿಸುತ್ತಿರುವುದಾಗಿ ತಿಳಿದು ಬಂದಿದೆ.

ಈ ಕಳ್ಳ ಸಾಗಾಟಗಾರರು ಚಕ್ಕೆಗಳನ್ನು ಅಪಹರಿಸಿ ಲಾರಿಗಟ್ಟಲೆ ಮೈಸೂರಿಗೆ ತಲುಪಿಸುತ್ತಿರುವುದಾಗಿ ತಿಳಿದು ಬಂದಿದೆ.

ಈ ಬಗ್ಗೆ ಅರಣ್ಯ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದಿರುವುದನ್ನು ನೋಡಿದಾಗ ಕಾಳಸಂತೆಕೋರರಿಗೆ ಶಾಮೀಲಾಗಿರುವ ಅನುಮಾನ ವ್ಯಕ್ತವಾಗುತ್ತದೆ.

ಕನ್ನಡದಲ್ಲಿ ವ್ಯವಹಾರ ಅಧಿಕಾರಿಗಳಿಗೆ ಕರೆ

ಶಿವಮೊಗ್ಗ, ಡಿ. 28– ಗ್ರಾಮೀಣ ಜನರಿಗೆ ಅರ್ಥವಾಗುವಂತೆ ಸರಳ ಕನ್ನಡದಲ್ಲಿ ಸರ್ಕಾರಿ ಅಧಿಕಾರಿಗಳು ವ್ಯವಹರಿಸಬೇಕೆಂದು ಕಂದಾಯ ಉಪ ವಿಭಾಗಾಧಿಕಾರಿ ವೋಸಪ್ಪ ಅವರು ತಿಳಿಸಿದರು.

ಅವರು ರಾಜ್ಯ ಸರ್ಕಾರಿ ನೌಕರರ ಆರು ದಿನಗಳ ತರಬೇತಿ ಶಿಬಿರವನ್ನು ಇತ್ತೀಚೆಗೆ ಉದ್ಘಾಟಿಸಿ ಮಾತನಾಡುತ್ತಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶನಾಲಯವು ಏರ್ಪಡಿಸಿದ್ದ ಈ ಶಿಬಿರದಲ್ಲಿ ಸುಮಾರು ಮೂವತ್ತು ಮಂದಿ ಭಾಗವಹಿಸಿದ್ದರು.

ಮುಂದಿನ ಮಾರ್ಚ್ ಒಳಗೆ ಇನ್ನೂ ಮೂರು ತರಬೇತಿ ಶಿಬಿರಗಳನ್ನು ಶಿಕಾರಿಪುರ, ಸಾಗರ ಮತ್ತು ಭದ್ರಾವತಿಯಲ್ಲಿ ನಡೆಸಲಾಗುವುದೆಂದು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಾಯಕ ನಿರ್ದೇಶಕ ಎ. ಎಸ್. ಚಂದ್ರಶೇಖರ್ ಅವರು ತಿಳಿಸಿದರು.

ಇತ್ತೀಚೆಗೆ ತೀರ್ಥಹಳ್ಳಿಯಲ್ಲಿ ಎಳ್ಳಮವಾಸ್ಯೆಯ ಅಂಗವಾಗಿ ರಥೋತ್ಸವ ಜರುಗಿತು.

ಕಾವೇರಿ 3ನೇ ಹಂತ ಮಾರ್ಚ್‌ನಲ್ಲಿ ಆರಂಭ

(ಮುಂಗಾರು ವರದಿ)

ಬೆಂಗಳೂರು, ಡಿ. 28 :– ನಗರಕ್ಕೆ ನೀರು ಒದಗಿಸಲು 240ಕೋಟಿರೂ.ಗಳ ಕಾವೇರಿ ಮೂರನೇ ಹಂತದ ಯೋಜನೆ ಕಾಮಗಾರಿಯು ಬರುವ ಮಾರ್ಚ್ ತಿಂಗಳ ಕೊನೆಯ ವೇಳೆಗೆ ಆರಂಭಗೊಳ್ಳುವ ನಿರೀಕ್ಷೆಯಿದೆ ಎಂದು ನಗರಾಭಿವೃದ್ಧಿ ಸಚಿವ ಎ. ಎಸ್. ಕೃಷ್ಣ ಅಯ್ಯರ್ ಇಂದು ಇಲ್ಲಿ ತಿಳಿಸಿದರು.

ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದು ಏಳನೇ ಯೋಜನೆಗೆ ಸಂಬಂಧಿಸಿದಂತೆ ಯೋಜನೆ ಆಯೋಗಗಳ ಸಭೆಯು ಡಿ. 31ರಂದು ದೆಹಲಿಯಲ್ಲಿ ನಡೆಯಲಿದ್ದು ಯೋಜನೆಗೆ ಕೇಂದ್ರದ ನೆರವಿನ ಬಗ್ಗೆ ಆ ಸಭೆಯಲ್ಲಿ ರಾಜ್ಯದ ಅಧಿಕಾರಿಗಳು ಪ್ರತಿನಿಧಿಸುವರೆಂದು ತಿಳಿಸಿದರು.

ಕೇಂದ್ರ ನೆರವು ನೀಡದೆ ಹೋದರೆ ರಾಜ್ಯದ ಯೋಜನೆಯಿಂದಲೇ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಎಲ್ಲಾ ಏರ್ಪಾಟು ಮಾಡಲಾಗಿದೆಯೆಂದು ತಿಳಿಸಿದ ಸಚಿವರು ಜನವರಿ ಮೊದಲನೆ ವಾರದಲ್ಲಿ ಇದಕ್ಕೆ ಟೆಂಡರ್ ಕರೆಯಲಾಗುವದೆಂದರು.

ಹದಿನಾಲ್ಕು ನಗರ ಹಾಗೂ ಪ್ರದೇಶಗಳ ನೀರು ಪೂರೈಕೆ ಯೋಜನೆಗಳನ್ನು ಒಂದೊಂದಾಗಿ ಕಾರ್ಯಗತಗೊಳಿಸಲಾಗುವುದೆಂದು ಅವರು ತಿಳಿಸಿದರು.

ಬೆಂಗಳೂರು ನಗರದ ನಾಗರಿಕರಿಗೆ ಬರುವ ಮಾರ್ಚ್ ತಿಂಗಳವರೆಗೆ ಈಗ ಪೂರೈಸಲಾಗುತ್ತಿರುವ ಪ್ರಮಾಣದಲ್ಲೇ ನೀರನ್ನು ಪೂರೈಸಲಾಗುವದೆಂದು ಸಚಿವರು ಸ್ಪಷ್ಟಪಡಿಸಿದರು.

ನಗರದಲ್ಲಿ ನಾಲ್ಕು ಗಂಟೆ ಕಾಲ ನೀರು ಸರಬರಾಜು ಮಾಡಲು ಸೂಕ್ತ ಏರ್ಪಾಡು ಮಾಡಲಾಗಿದೆಯೆಂದು ಕೃಷ್ಣ ಅಯ್ಯರ್ ತಿಳಿಸಿದರು.

ಒಂದು ಕೋಟಿ ರೂ. ವೆಚ್ಚದಲ್ಲಿ ನಗರದ ವಿವಿಧ ಬಡಾವಣೆಗಳಲ್ಲಿ 107 ಕೊಳವೆ ಬಾವಿ ತೋಡಿಸುವ ಯೋಜನೆ ಅನ್ವಯ ನೂರು ಕೊಳವೆ ಬಾವಿಗಳಲ್ಲಿ ಹತ್ತು ಮಾತ್ರ ವಿಫಲಗೊಂಡಿವೆ ಎಂದು ಅವರು ಹೇಳಿದರು.

ಆಕ್ಟ್ರಾಯಿ ರದ್ದಿನ ಪರಿಣಾಮವಾಗಿ ಬೆಂಗಳೂರು ನಗರಸಭೆಗೆ ಅಭಿವೃದ್ಧಿ ಕಾರ್ಯಕ್ಕಾಗಿ ನಾಲ್ಕು ಕೋಟಿ ರೂ. ನೀಡಲಾಗಿದೆ. ಮತ್ತು ವಿವಿಧ ಪುರಸಭೆಗಳಿಗೆ 2 ಕೋಟಿ ರೂ. ಒದಗಿಸಲಾಗಿದೆಯೆಂದು ಸಚಿವರು ತಿಳಿಸಿದರು.

ಕೋರಮಂಗಲ ಹೆಬ್ಬಾಳು ಹಾಗು ಎಚ್. ಎ. ಎಲ್ ಬಳಿ 16 ಕೋಟಿ ರೂ. ಗಳ ವೆಚ್ಚದಲ್ಲಿ ಸ್ಥಾಪಿಸಲಾಗುವ ಚರಂಡಿಯ ಕೊಳಚೆ ನೀರನ್ನು ಶುದ್ಧೀಕರಿಸುವ ಘಟಕಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಟೆಂಡರು ಹಾಗು ಹಣಕಾಸು ಟೆಂಡರುಗಳನ್ನು ಈಗಾಗಲೆ ಕರೆಯಲಾಗಿದೆಯೆಂದು ಅವರು ಹೇಳಿದರು.

50,000 ರೂಪಾಯಿ ಬಹುಮಾನ ಗೆಲ್ಲಿರಿ

ಮಾದರಿ 27

12	5	10
7	9	11
8	13	6

ಪ್ರಥಮ ಬಹುಮಾನ: ಕಲರ್ ಟಿ. ವಿ. ಅಥವಾ ರೂ. 8,000/-ನಗದು

ಫ್ರೀ ಸ್ಪೀಡ್ ಡಿಸ್ಕ್ ಅಥವಾ ಟುಸ್ಕರ್ ವಿಸ್ಕಿ ಅರ್ಧ ಬೆಲೆಯಲ್ಲಿ

ತೃತೀಯ ಬಹುಮಾನ: 170/-ರ ಕಂತಿನಲ್ಲಿ ಜಪಾನ್ ಮಾದರಿಯ ಟು. ಇನ್. ಒನ್ ಟೇಪ್ ರೆಕಾರ್ಡರ್

ಮೇಲೆ ಕೊಟ್ಟ ಮಾದರಿಯಂತೆ ಒಂದು ಖಾಲಿ ಕಾಗದದ ಮೇಲೆ 9 ಖಾಲಿ ಚೌಕಗಳನ್ನು ರಚಿಸಿ ಅದರಲ್ಲಿ ಉದ್ದವಾಗಿ, ಅಡ್ಡವಾಗಿ ಹಾಗೂ ಓರೆಯಾಗಿ ಕೂಡಿಸಿದಾಗ 30 ಬರುವಂತೆ 6ರಿಂದ 14ರವರೆಗಿನ ಅಂಕಿಗಳನ್ನು ತುಂಬಿರಿ. ಒಂದು ಅಂಕೆಯನ್ನು ಒಮ್ಮೆ ಮಾತ್ರ ಬಳಸಬೇಕು. ತುಂಬಿದ ಪತ್ರವನ್ನು 15 ದಿನದೊಳಗೆ ಕಳಿಸಬೇಕು.

RACHNA ELECTRONICS (MG)
Post Box No. 6560, New Delhi-110027

ಸುನಿಲ್‌ದತ್ ವಿಜಯ

ಮುಂಬಯಿ, ಡಿ. 28 :– ಕಾಂಗ್ರೆ ಅಭ್ಯರ್ಥಿ ಸುನಿಲ್ ದತ್ ಅವರು ಉತ್ತರ ಮುಂಬಯಿ ಕ್ಷೇತ್ರದಿಂದ ತಮ್ಮ ಸಮೀಪದ ಸ್ಪರ್ಧಿ ಬಿಜೆಪಿಯ ರಾಮ್ ಜೇಠ್ ಮಲಾನಿ ಅವರನ್ನು ಒಂದು ಲಕ್ಷದ ಇಪ್ಪತ್ತೈದು ಸಾವಿರ ಮತಗಳಿಂದ ಸೋಲಿಸಿ ಲೋಕಸಭೆಗೆ ಆಯ್ಕೆಯಾಗಿದ್ದಾರೆ.

ಶಂಕರಾನಂದ ಆಯ್ಕೆ



ಬೆಂಗಳೂರು, ಡಿ. 28–ಚಿಕ್ಕೋಡಿ ಲೋಕಸಭಾ ಕ್ಷೇತ್ರದಲ್ಲಿ ಕೇಂದ್ರ ಆರೋಗ್ಯ ಮಂತ್ರಿ ಕಾಂಗ್ರೆ ಅಭ್ಯರ್ಥಿ ಬಿ. ಶಂಕರಾನಂದ ಅವರು ತಮ್ಮ ನಿಕಟ ಪ್ರತಿಸ್ಪರ್ಧಿ ಜನತಾ ಪಕ್ಷದ ಎ. ಕೆ. ರಾಯಣ್ಣನವರ್ ಅವರನ್ನು ಮೂರು ಸಾವಿರ ಮತಗಳ ಅಂತರದಿಂದ ಸೋಲಿಸಿ ಆಯ್ಕೆಯಾಗಿದ್ದಾರೆ.

ಶ್ರೀಕಂಠದತ್ತರ ವಿಜಯ



ಬೆಂಗಳೂರು, ಡಿ. 28 :– ಮೈಸೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಾಂಗ್ರೆ ಅಭ್ಯರ್ಥಿ ಶ್ರೀಕಂಠದತ್ತ ಒಡೆಯರ್ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿಯಾದ ಜನತಾಪಕ್ಷದ ಕೆ. ಪಿ. ಶಾಂತಮೂರ್ತಿ ಅವರನ್ನು 65,000 ಮತಗಳಿಂದ ಪರಾಭವಗೊಳಿಸಿ ಚುನಾಯಿತರಾಗಿದ್ದಾರೆ.

ತಾರಾದೇವಿಯವರಿಗೆ ದೊಡ್ಡ ಬಹುಮತ

ಚಿಕ್ಕಮಗಳೂರು, ಡಿ. 28 :– ಕಾಂಗ್ರೆಸ್ (ಐ) ಪಕ್ಷದ ನಾಯಕಿ ಡಿ. ಕೆ. ತಾರಾದೇವಿಯವರು ಚಿಕ್ಕಮಗಳೂರು ಕ್ಷೇತ್ರದಿಂದ ತಮ್ಮ ಸಮೀಪ ಸ್ಪರ್ಧಿ ಕಮ್ಯೂನಿಸ್ಟ್ ಪಕ್ಷದ ಬಿ. ಕೆ. ಸುಂದರೇಶ್ ಅವರಿಂದ 1,50,000 ಮತಗಳ ದೊಡ್ಡ ಬಹು ಮತ ಪಡೆದು ದೇಶದ ಎಂಟನೇಯ ಲೋಕಸಭೆಗೆ ಆಯ್ಕೆಯಾಗಿದ್ದಾರೆ.

1978ರಲ್ಲಿ ಉಪಚುನಾವಣೆಯೊಂದರಲ್ಲಿ ದಿವಂಗತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರನ್ನು ಲೋಕ ಸಭೆಗೆ ಆಯ್ಕೆ ಮಾಡಿ ದೇಶದ ರಾಜಕೀಯಕ್ಕೆ ಹೊಸ ತಿರುವು ನೀಡಿದ ಚಿಕ್ಕಮಗಳೂರು ಕ್ಷೇತ್ರ ರಾಜಕೀಯ ಭೂಪಟದಲ್ಲಿ ಗಣ್ಯ ಸ್ಥಾನ ಪಡೆದಿದೆ.

ಮತಗಳ ವಿವರ ಇಂತಿದೆ:

ಒಟ್ಟು ಮತದಾರರು	6,73,767
ಬಿದ್ದ ಮತಗಳು	4,44,583
ಅಸಿಂಧು	9,418
ಡಿ. ಕೆ. ತಾರಾದೇವಿ (ಕಾಂಗ್ರೆ)	2,68,932
ಬಿ. ಕೆ. ಸುಂದರೇಶ್ (ಸಿಪಿಐ)	1,28,872
ಲೋಕೇಶ್ ಗೌಡ (ರೈತಸಂಘ)	16,446
ಸಿ. ಎಂ. ಎಸ್. ಶಾಸ್ತ್ರಿ	5,810
ಡಿ. ಎಸ್. ಗಂಗಾಧರಪ್ಪ	2,084
ಎಂ. ಗೋವಿಂದ ಪ್ರಭು	2,289
ಎಂ. ಕೆ. ದಯಾನಂದ	237
ಡಿ. ನಾರಾಯಣ ಪೂಜಾರಿ	3,732
ಎಚ್. ಎಂ. ಎಸ್. ಭೈರಪ್ಪ	706
ಕೆ. ಪಿ. ರತ್ನಾಕರ ಪ್ರಭು	899
ವಿ. ವರದರಾಜ್	2,550

(ಕೊನೆಯ 9 ಮಂದಿ ಠೇವಣಿ ಕಳೆದುಕೊಂಡರು)

ಗಂಗಾಧರಪ್ಪ ಮತ್ತು ವರದರಾಜ್ ಸಿಪಿಐ ಪರ ಸ್ಪರ್ಧೆಯಿಂದ ನಿವೃತ್ತರಾಗಿದ್ದರು.

ದೊಡ್ಡದಾಗಲಿದೆ ಕಾಂಗ್ರೆಬಲ

ನವದೆಹಲಿ, ಡಿ. 28– ಪಿಟಿಐನ ಕಂಪ್ಯೂಟರ್ ಸಮೀಕ್ಷೆಯೊಂದರ ಪ್ರಕಾರ ಕಾಂಗ್ರೆ ಪಕ್ಷ ಗೆದ್ದ ಮೊದಲ 37 ಕ್ಷೇತ್ರಗಳಲ್ಲಿ 12ನ್ನು ವಿರೋಧ ಪಕ್ಷದ ಕೈಯಿಂದ ಕಸಿದುಕೊಂಡಿದ್ದರೆ ಆರು ಕ್ಷೇತ್ರಗಳನ್ನು ವಿರೋಧ ಪಕ್ಷ ಗಳಿಗೆ ಬಿಟ್ಟುಕೊಟ್ಟಿದೆ. ಗೆದ್ದ ಕ್ಷೇತ್ರಗಳ ಹಿನ್ನೆಲೆಯಲ್ಲಿ ಕಾಂಗ್ರೆ ಪಕ್ಷ ಶೇಕಡಾ 16ರಷ್ಟು ಬಲವರ್ಧನೆ ಮಾಡಿ ಕೊಂಡಿದೆ.

ಈ ಆಧಾರದಲ್ಲಿ ಲೆಕ್ಕ ಹಾಕಿದರೆ ಕಾಂಗ್ರೆ ಪಕ್ಷದ ಅಂತಿಮ ಬಲ ಹಿಂದೆ ಯಾವ ಕಾಲದಲ್ಲೂ ಇಲ್ಲದಷ್ಟು ಅದ್ಭುತವಾಗಲಿದೆ.

ಆಂಧ್ರದಲ್ಲಿ ಕಾಂಗ್ರೆಗೆ ಸಮರ್ಥ ಪ್ರತಿಹೋರಾಟ 'ತೆಲುಗು ದೇಶಂ' ಮಾತ್ರ ಕಾಂಗ್ರೆಯ ಮುನ್ನಡೆಯನ್ನು ತಡೆಯುವಲ್ಲಿ ಸಮರ್ಥವಾಗಿದೆ. ಜನತಾ, ಬಿಜೆಪಿ ಮತ್ತು ಕಮ್ಯೂನಿಸ್ಟ್ ಸಹಿತ ಇತರೆಲ್ಲಾ ಪಕ್ಷಗಳಿಗೆ ತೀವ್ರ ಹೊಡೆತ ಬಿದ್ದಿದೆ. ಕಾಂಗ್ರೆ ಜೊತೆಗೆ ಮೈತ್ರಿ ಸಾಧಿಸಿರುವ ಅಣ್ಣಾ ಡಿಎಂಕೆ ತಮಿಳುನಾಡಿನಲ್ಲಿ ತನ್ನ ಹಿಡಿತವನ್ನು ಬಿಗಿಗೊಳಿಸಿದೆ.

ಕಮ್ಯುನಿಸ್ಟರ ಹಿಡಿತವಿದ್ದ ಕೇರಳ ಮತ್ತು ಮಾರ್ಕ್ಸಿಸ್ಟರ ಆಳ್ವಿಕೆ ಇರುವ ಪಶ್ಚಿಮ ಬಂಗಾಳಗಳಲ್ಲಿ ಕೂಡಾ ಕಾಂಗ್ರೆ ಗಣನೀಯ ಪ್ರಮಾಣದ ಮತಗಳನ್ನು ಗಳಿಸಿದೆ. ಕರ್ನಾಟಕ ಸಹಿತ ಹಿಂದೀ ವಲಯದ ರಾಜ್ಯಗಳಾದ ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ, ಗುಜರಾತ್‌ಗಳಲ್ಲಿ ಕಾಂಗ್ರೆ ಹೆಚ್ಚಿನ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದರೆ, ಹರ್‍ಯಾನ ಮತ್ತು ದೆಹಲಿಯ ಎಲ್ಲಾ ಕ್ಷೇತ್ರಗಳಲ್ಲೂ ಜಯಗಳಿಸುವ ಸೂಚನೆ ನೀಡಿದೆ.

'ದೇಶಾದ್ಯಂತ 400 ಕ್ಷೇತ್ರಗಳಲ್ಲಿ ತಮ್ಮ ಪಕ್ಷ ಮುನ್ನಡೆಯುತ್ತಿದೆ' ಎಂದು ಕಾಂಗ್ರೆ ಎಐಸಿಸಿ ಮೂಲ ತಿಳಿಸಿವೆ.

1980ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆ ಪಕ್ಷದ ಎಚ್. ಎನ್. ನಂಜೇಗೌಡರು ಜನತಾ ಪಕ್ಷದ ಅಭ್ಯರ್ಥಿ ಬಿ. ಬಿ. ಶಿವಪ್ಪ ಅವರನ್ನು 94,748 ಮತಗಳಿಂದ ಸೋಲಿಸಿ ಆಯ್ಕೆಯಾಗಿದ್ದರು.

ರಾಜಿನಾಮೆ ಕೊಡಲು ಹೆಗಡೆ ನಕಾರ

ಬೆಂಗಳೂರು, ಡಿ. 28 :– ತನ್ನ ಸರಕಾರ ರಾಜಿನಾಮೆ ನೀಡಬೇಕೆಂಬ ಕಾಂಗ್ರೆಸ್ (ಇ) ಕೋರಿಕೆಯನ್ನು ಕರ್ನಾಟಕ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಇಂದು ತಿರಸ್ಕರಿಸಿದರು.

ಇದು ರಾಜ್ಯ ವಿಧಾನ ಸಭೆಯ ಚುನಾವಣೆಯಲ್ಲ ಆದುದರಿಂದ ರಾಜ್ಯ ವಿಧಾನ ಸಭೆಯನ್ನು ವಿಸರ್ಜಿಸುವ ಸಲಹೆಯನ್ನು ತಾನು ಕೊಡುವಂತೆಯೂ ಇಲ್ಲ ಎಂದೂ ಹೆಗಡೆಯವರು ಹೇಳಿಕೆಯೊಂದರಲ್ಲಿ ತಿಳಿಸಿದರು.

ಜನತಾಪಕ್ಷ ಕೇವಲ ಒಂದು ಸ್ಥಾನವನ್ನು ಗೆದ್ದ 1980 ಚುನಾವಣೆಗೆ ಈ ಬಾರಿಯ ಚುನಾವಣೆಯನ್ನು ಹೋಲಿಸುವಾಗ ಪಕ್ಷವು ಎರಡು ಹೆಚ್ಚು ಸ್ಥಾನ ಗೆದ್ದಿದೆ ಎಂದೂ ಅವರು ಹೇಳಿದರು.

ಡಿ. 30ಕ್ಕೆ ಹೆಗಡೆ ದೆಹಲಿಗೆ

(ಮುಂಗಾರು ವರದಿ)

ಬೆಂಗಳೂರು, ಡಿ. 28 :– ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಡಿಸೆಂಬರ 30ರಂದು ದೆಹಲಿಗೆ ತೆರಳಲಿದ್ದಾರೆ.

ಅಲ್ಲಿ ಡಿಸೆಂಬರ್ 31ರಂದು ಜರಗಲಿರುವ ಜನತಾ ಪಕ್ಷದ ಸಂಸದೀಯ ಮಂಡಳಿಯ ಸಭೆಯಲ್ಲಿ ಅವರು ಪಾಲ್ಗೊಳ್ಳಲಿದ್ದು ಜನವರಿ ದಿನಾಂಕ ಒಂದರಂದು ನಗರಕ್ಕೆ ವಾಪಾಸಾಗುವ ಕಾರ್ಯಕ್ರಮವಿದೆ.

ಎಸ್ಸೆಂ ಕೃಷ್ಣ ರಾಜೀನಾಮೆ



ಬೆಂಗಳೂರು, ಡಿ. 28– ಚುನಾವಣೆಯಲ್ಲಿ ಸೋಲನ್ನು ಅನುಭವಿಸಿದ ಕೇಂದ್ರ ವಾಣಿಜ್ಯ ಖಾತೆಯ ರಾಜ್ಯ ಸಚಿವ ಎಸ್. ಎಂ. ಕೃಷ್ಣ ಅವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆಯಿತ್ತಿದ್ದಾರೆ.

ಎಸ್. ಎಂ. ಕೃಷ್ಣ ಅವರನ್ನು ಎಪ್ಪತ್ತರ ಹರೆಯದ ಜನತಾ ಅಭ್ಯರ್ಥಿ ಕೆ. ವಿ. ಶಂಕರೇಗೌಡರು ಒಂದು ಲಕ್ಷದ ಇಪ್ಪತ್ತೈದು ಸಾವಿರ ಮತಗಳಿಂದ ಪರಾಭವಗೊಳಿಸಿದ್ದಾರೆ.

ಪ್ರಧಾನ ಮಂತ್ರಿ ರಾಜೀವ್ ಗಾಂಧಿಯವರಿಗೆ ಕಳುಹಿಸಿರುವ ತಮ್ಮ ರಾಜಿನಾಮೆ ಪತ್ರದಲ್ಲಿ ದಿವಂಗತ ಪ್ರಧಾನಿ ಇಂದಿರಾ ಗಾಂಧಿ ಮತ್ತು ನೂತನ ಪ್ರಧಾನ ಮಂತ್ರಿ ರಾಜೀವ್ ಗಾಂಧಿಯವರು ತಮ್ಮ ಮೇಲೆ ಇಟ್ಟಿರುವ ನಂಬಿಕೆಯನ್ನು ಕೃತಜ್ಞತೆಯಿಂದ ಸ್ಮರಿಸಿಕೊಂಡಿದ್ದಾರೆ.

ರಾಜೀವ್ ಗಾಂಧಿಯವರ ನಾಯಕತ್ವದಲ್ಲಿ ತಮ್ಮ ಅಚಲ ನಿಷ್ಠೆಯನ್ನು ಸ್ಪಷ್ಟಪಡಿಸಿರುವ ಕೃಷ್ಣ ಅವರು ಕಾಂಗ್ರೆಸ್(ಐ) ಪಕ್ಷಕ್ಕೆ ತಮ್ಮ ಸಹಕಾರದ ಭರವಸೆ ನೀಡಿದ್ದಾರೆ.

ಚೆನ್ನಾರೆಡ್ಡಿ ಸೋಲು

ಹೈದರಾಬಾದ್, ಡಿ. 28 – ಮಾಜಿ ಮುಖ್ಯಮಂತ್ರಿ ಮತ್ತು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಪಕ್ಷದ ಸ್ಥಾಪಕರಾದ ಡಾ. ಎಂ. ಚೆನ್ನಾ ರೆಡ್ಡಿ ಅವರು ಪರಾಭವ ಹೊಂದಿದ್ದಾರೆ.

ಇಲ್ಲಿನ ಕರೀಂನಗರದ ಕ್ಷೇತ್ರದಿಂದ ಸ್ಪರ್ಧಿಸಿರುವ ಅವರನ್ನು ಕಾಂಗ್ರೆ ಪಕ್ಷದ ಜೆ. ಚೊಕ್ಕಾರಾವ್ ಅವರು 56,000 ಮತಗಳಿಂದ ಸೋಲಿಸಿ ಚುನಾಯಿತರಾಗಿದ್ದಾರೆ.

ಕೆ. ಸಿ. ಪಂತ್ ಗೆಲುವು



ನವದೆಹಲಿ, ಡಿ. 28 – ಕಾಂಗ್ರೆಸ್ (ಐ)ನ ಕೆ. ಸಿ. ಪಂತ್ ಅವರು ನವದೆಹಲಿ ಲೋಕಸಭಾ ಕ್ಷೇತ್ರದಿಂದ ತಮ್ಮ ಹತ್ತಿರದ ಪ್ರತಿಸ್ಪರ್ಧಿ ಬಿ.ಜೆ.ಪಿ.ಯ ಕನ್ವರಲಾಲ್ ಗುಪ್ತಾ ಅವರನ್ನು 70,000 ಮತಗಳ ಅಂತರದಿಂದ ಸೋಲಿಸಿ ಆಯ್ಕೆಯಾಗಿದ್ದಾರೆ.

ಪಿ. ಜಿ. ಆರ್. ಸಿಂಧ್ಯಾ ಪರಾಭವ



ಬೆಂಗಳೂರು, ಡಿ. 28 :– ರಾಜ್ಯ ನೀರಾವರಿ ಸಚಿವ ಪಿ. ಜಿ. ಆರ್ ಸಿಂಧ್ಯಾ ಅವರು ಕನಕಪುರ ಕ್ಷೇತ್ರದಲ್ಲಿ ಪರಾಜಿತಗೊಂಡಿದ್ದಾರೆ.

ಅವರು ತಮ್ಮ ಹತ್ತಿರದ ಸ್ಪರ್ಧಿ ಕಾಂಗ್ರೆನ ಯಂ. ವಿ. ಚಂದ್ರಶೇಖರ ಮೂರ್ತಿ ಅವರಿಗೆ 13,000 ಮತಗಳಿಂದ ಪರಾಜಿತಗೊಂಡರು.

ಕನಕಪುರವು ಜನತಾ ಪಕ್ಷದ ಪ್ರತಿಷ್ಠೆಯ ಕ್ಷೇತ್ರವಾಗಿತ್ತು. ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಡೆ ಅವರು ಇದೇ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿದ್ದರು.

ಚಂದ್ರಶೇಖರ ಮೂರ್ತಿ ಅವರು ಕಳೆದ ಬಾರಿ ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರ ಅಳಿಯ ರಾಜಶೇಖರನ್ ಅವರ ವಿರುದ್ಧ 1.33 ಲಕ್ಷ ಮತಗಳ ಭಾರೀ ಬಹು ಮತ ಗಳಿಸಿದ್ದರು. ರಾಜಶೇಖರನ್ ಅವರು ಇತ್ತೀಚೆಗೆ ಜನತಾ ಪಕ್ಷವನ್ನು ತೊರೆದು ಕಾಂಗ್ರೆ ಪಕ್ಷವನ್ನು ಸೇರಿದ್ದರು.

ಒಟ್ಟು ಮತದಾರರು		—	9,03,098
ಒಟ್ಟು ಬಿದ್ದ ಮತಗಳು		—	6,52,044
ತಿರಸ್ಕೃತ ಮತಗಳು		—	13,324
ಎಂ.ವಿ. ಚಂದ್ರಶೇಖರಪ್ಪ (ಕಾಂಗ್ರೆ)		—	3,05,210
ಪಿ.ಜಿ. ಆರ್. ಸಿಂಧ್ಯಾ (ಜನತಾ)		—	2,98,184
ಎ.ಜಿ. ಸದಾಶಿವ	(ಪಕ್ಷೇತರ)	—	9,292
ಕೆ. ಅಣ್ಣಯ್ಯ	"	—	2,129
ದೇವಗಿರಿ ಪಾಂಡುರಂಗ	"	—	1,349
ರಾಮಕೃಷ್ಣ ನ್ಯಾಕ್	"	—	1,239
ಮಹಮ್ಮದ್ ಫಕ್ರುದ್ದಿನ್	"	—	1,018
ಬಶೀರ್ ಅಹ್ಮದ್	"	—	891

ಮೊದಲು ದೇವರಿಗೆ ಹೂ ಅಭ್ಯರ್ಥಿಗೆ ಮತ ನಂತರ

ಉಜ್ಜಯಿನಿಯ ಪ್ರಸಿದ್ಧ ಮಹಾಕಾಳ ದೇವಳದ ಬಳಿಯ ಮತಕಟ್ಟೆಗೆ ಮತದಾನಕ್ಕಾಗಿ ಆಗಮಿಸಿದ ಶ್ರದ್ಧಾವಂತ ಹಿಂದೂಗಳು ಕೆಲವರು ಮೊದಲಾಗಿ ದೇವಸ್ಥಾನ ಸಂದರ್ಶಿಸಿ ಶಿವಲಿಂಗಕ್ಕೆ ಹೂಗಳನ್ನು ಅರ್ಪಿಸಿದ ಬಳಿಕವೇ ಮತಕಟ್ಟೆ ಪ್ರವೇಶಿಸಿ ಮತದಾನ ಮಾಡಿದರು.

ಜಾಫರ್ ಷರೀಫ್ ಪುನರಾಯ್ಕೆ

ಬೆಂಗಳೂರು, ಡಿ. 28– ಕೇಂದ್ರ ನೀರಾವರಿ ಖಾತೆಯ ರಾಜ್ಯ ಸಚಿವ ಸಿ. ಕೆ. ಜಾಫರ್ ಷರೀಫ್ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿಯಾದ ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿ ಜಾರ್ಜ್ ಫೆರ್ನಾಂಡಿಸ್ ಅವರನ್ನು 40,000 ಮತಗಳಿಂದ ಸೋಲಿಸಿ ಬೆಂಗಳೂರು (ಉತ್ತರ) ದಿಂದ ಲೋಕಸಭೆಗೆ ಪುನರಾಯ್ಕೆಯಾಗಿದ್ದಾರೆ.

ಎನ್‌ಟಿಆರ್ ಕೃತಜ್ಞತೆ

ಹೈದರಾಬಾದ್, ಡಿ. 28–ಆಂಧ್ರಪ್ರದೇಶದಲ್ಲಿ ತೆಲುಗು ದೇಶಂ ಪಕ್ಷದ ಅಭ್ಯರ್ಥಿಗಳ ವಿಜಯವನ್ನು ಜನತೆಯ ವಿಜಯ ಎಂದಿರುವ ಮುಖ್ಯಮಂತ್ರಿ ಎನ್.ಟಿ. ರಾಮರಾವ್ ಅವರು ಈ ಚುನಾವಣಾ ಫಲಿತಾಂಶ ಜನತೆಗೆ ತಮ್ಮ ಮತ್ತು ಪಕ್ಷದ ಮೇಲಿನ ನಂಬಿಕೆಯನ್ನು ವ್ಯಕ್ತಪಡಿಸುತ್ತದೆ ಎಂದು ಹೇಳಿದ್ದಾರೆ.

ಕಳೆದ ಎರಡು ವರ್ಷಗಳ ತಮ್ಮ ಅಧಿಕಾರಾವಧಿಯಲ್ಲಿಯ ಸಾಧನೆಗಳಿಗೆ ಜನತೆ ಈ ಮೂಲಕ ತಮ್ಮ ಬೆಂಬಲ ಸೂಚಿಸಿದ್ದು ಇನ್ನು [illegible] ತಮ್ಮ ಪಕ್ಷ ಹಿಂದುಳಿದ ವರ್ಗದವರ ಕಲ್ಯಾಣಕ್ಕಾಗಿ ಮತ್ತು ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸುವುದೆಂದು ಎನ್. ಟಿ. ಆರ್. ತಿಳಿಸಿದ್ದಾರೆ.

ಜನರ ತೀರ್ಪಿಗೆ ತಲೆಬಾಗುವೆ: ವಾಜಪೇಯಿ

ನವದೆಹಲಿ, ಡಿ. 28– ಪ್ರಜಾತಂತ್ರವಾದಿ ಆಗಿರುವ ತಾನು ಗ್ವಾಲಿಯರ್‌ನ ಜನತೆ ನೀಡಿದ ತೀರ್ಪನ್ನು ಒಪ್ಪಿದ್ದೇನೆ ಎಂದು ಆ ಲೋಕಸಭಾ ಕ್ಷೇತ್ರದಲ್ಲಿ ಸೋತಿರುವ ಬಿ.ಜೆ.ಪಿ. ಅಧ್ಯಕ್ಷ ಎ.ಬಿ. ವಾಜಪೇಯಿ ಹೇಳಿದ್ದಾರೆ.

ಎಂತಿದ್ದರೂ ಮಹಾರಾಜ (ಸಿಂಧಿಯಾ) ಅವರ ದೊಡ್ಡ ಪ್ರಮಾಣದ ವಿಜಯ ನ್ಯಾಯ ರೀತಿಯಲ್ಲಿ ಪಡೆದುದಲ್ಲ ಎಂದೂ ಅವರು ಹೇಳಿದ್ದಾರೆ.

ವಿಜಯ ಭಾಸ್ಕರ ರೆಡ್ಡಿ ಪರಾಭವ

ಹೈದರಾಬಾದ್, ಡಿ. 28 - ಕೇಂದ್ರ ಕೈಗಾರಿಕಾ ಸಚಿವ ಕೆ. ವಿಜಯ ಭಾಸ್ಕರ ರೆಡ್ಡಿ ಕರ್ನೂಲ್ ಕ್ಷೇತ್ರದಲ್ಲಿ ಪರಾಭವಗೊಂಡಿದ್ದಾರೆ.

ನಾಗಮಂಗಲ: ಕಾಂಗ್ರೆ ಬಂಡುಕೋರರಿಗೆ

ಬೆಂಗಳೂರು, ಡಿ. 28– ನಾಗಮಂಗಲ ಕ್ಷೇತ್ರದಿಂದ ರಾಜ್ಯ ವಿಧಾನ ಸಭೆಗೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆ ಬಂಡುಕೋರ ಅಭ್ಯರ್ಥಿ ಎಚ್.ಟಿ. ಕೃಷ್ಣಪ್ಪ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಜನತಾದ ಶ್ರೀಮತಿ ಕೆಂಪಮ್ಮ ಚಿಗರೀ ಗೌಡ ಅವರನ್ನು 7,865 ಮತಗಳ ಅಂತರದಿಂದ ಸೋಲಿಸಿ ಆಯ್ಕೆಯಾಗಿದ್ದಾರೆ.

ಸುಶೀಲಾ ಗೋಪಾಲನ್ ಪರಾಭವ

ಕಾಂಗ್ರೆ ಪಕ್ಷದ ವಕ್ಕಂ ಪುರುಷೋತ್ತಮನ್ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿಯಾದ ಸಿಪಿಎಂ ಪಕ್ಷದ ಸುಶೀಲಾ ಗೋಪಾಲನ್ ಅವರನ್ನು 37,000 ಮತಗಳಿಂದ ಸೋಲಿಸಿ ಆಲೆಪ್ಪಿ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ.

ಕಾಂಗ್ರೆ ಪಕ್ಷದ ಡಾ। ಕೆ. ಜಿ. ಅಡಿಯೋಡಿ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಅಖಿಲ ಭಾರತೀಯ ಮುಸ್ಲಿಂಲೀಗ್ ಪಕ್ಷದ ಕೆ. ಮೊಯಿದಿನ್ ಕುಟ್ಟಿ ಅವರನ್ನು 50,000 ಮತಗಳಿಂದ ಸೋಲಿಸಿ ಕಲ್ಲಿಕೋಟೆ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ.

ಶಿವಮೊಗ್ಗ ಕಾಂಗ್ರೆಗೆ



ಶಿವಮೊಗ್ಗ ಡಿ. 28– ಶಿವಮೊಗ್ಗ ಲೋಕಸಭಾ ಕ್ಷೇತ್ರದ ಕಾಂಗ್ರೆಸ್(ಐ) ಅಭ್ಯರ್ಥಿ ಟಿ. ವಿ. ಚಂದ್ರಶೇಖರಪ್ಪ ಅವರು ತನ್ನ ನಿಕಟ ಪ್ರತಿಸ್ಪರ್ಧಿ ಬಿಜೆಪಿಯ ಶಿವಣ್ಣ ಗೌಡ ಅವರಿಗಿಂತ ಒಂದು ಲಕ್ಷಕ್ಕೂ ಹೆಚ್ಚು ಮತಗಳಿಂದ ಜಯಗಳಿಸಿದ್ದಾರೆ.

ಶುಕ್ಲಾ ಮುನ್ನಡೆ

ಮಹಾಸಮುಂದ್ ಕ್ಷೇತ್ರದಲ್ಲಿ ಸ್ಪರ್ಧಿಸಿರುವ ಕಾಂಗ್ರೆ ಪಕ್ಷದ ಕೇಂದ್ರದ ಮಾಜಿ ಸಚಿವ ವಿ. ಸಿ. ಶುಕ್ಲಾ ಅವರು ಎರಡನೆ ಸುತ್ತಿನ ಮತ ಎಣಿಕೆ ಮುಗಿದಾಗ ತಮ್ಮ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಡಾ॥ ರಮೇಶ್ ಅವರಿಗಿಂತ 27,000 ಮತಗಳಿಂದ ಮುಂದಿದ್ದರು.

ಗೀತಾ ಮುಖರ್ಜಿ ಮುನ್ನಡೆ

ಕಲ್ಕತ್ತಾ, ಡಿ. 28– ಪಾನ್ಸ್‌ಕುರಾ ಕ್ಷೇತ್ರದಲ್ಲಿ ಸಿಪಿಎಂ (ಎಡರಂಗ)ದ ಅಭ್ಯರ್ಥಿ ಗೀತಾ ಮುಖರ್ಜಿ ಅವರು ಕಾಂಗ್ರೆಸ ಚಿತ್ತರಂಜನ್ ಚಕ್ರಬೋರ್ತಿ ವಿರುದ್ಧ 9,000 ಮತಗಳಿಂದ ಮುಂದಿದ್ದಾರೆ.

ಕಿದ್ವಾಯಿ ಮುನ್ನಡೆ

ನವದೆಹಲಿ, ಡಿ. 28– ಮೀರತ್ ಕ್ಷೇತ್ರದಿಂದ ಸ್ಪರ್ಧಿಸಿರುವ ಮೊಹ್ಸಿನ್ ಕಿದ್ವಾಯಿ (ಕಾಂಗ್ರೆ) ತಮ್ಮ ಸಮೀಪದ ಸ್ಪರ್ಧಿ ಡಿಎಂಕೆಪಿಯ ಮಂಜೂರ್ ಅಹ್ಮದ್ ಅವರಿಗಿಂತ 40,000 ಮತಗಳ ಅಂತರದಿಂದ ಮುಂದಿದ್ದಾರೆ.

ಅರುಣ್ ನೆಹರೂ ಮುನ್ನಡೆ

ರಾಯಬರೇಲಿ ಡಿ. 28– ರಾಯಬರೇಲಿಯ ಕಾಂಗ್ರೆಯ ಪ್ರಧಾನ ಕಾರ್ಯದರ್ಶಿ ಅರುಣ್ ನೆಹರೂ ಅವರು ಡಿಎಂಕೆಪಿಯ ಸವಿತಾ ಅಂಬೇಡ್ಕರ್ ವಿರುದ್ಧ 20,000 ಮತಗಳ ಮುನ್ನಡೆ ಸಾಧಿಸಿದ್ದಾರೆ.

ಶ್ರೀಪತಿ ಮಿಶ್ರಾ ಮುನ್ನಡೆ

ಲಕ್ನೊ, ಡಿ. 28– ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಶ್ರೀಪತಿ ಮಿಶ್ರಾ ಅವರು ಡಿಎಂಕೆಪಿಯ ಶಿಯಾ ಸರನ್‌ವರ್ಮ ಅವರನ್ನು 6,200 ಮತಗಳ ಅಂತರದಿಂದ ಹಿಂದಿಕ್ಕಿದ್ದಾರೆ.

ಕಮಲ್‌ನಾಥ್ ಮುನ್ನಡೆ

ನವದೆಹಲಿ, ಡಿ. 28– ನವದೆಹಲಿಯ ಛಿಂದ್ವಾರಾ ಕ್ಷೇತ್ರದ ಕಾಂಗ್ರೆ ಅಭ್ಯರ್ಥಿ ಕಮಲ್‌ನಾಥ್ ಅವರು ತಮ್ಮ ಸಮೀಪದ ಸ್ಪರ್ಧಿ ಬಿಜೆಪಿಯ ಬಾತ್ರಾ ರಾಮಕೃಷ್ಣನ್ ವಿರುದ್ಧ 70,000 ಮತಗಳಿಂದ ಮುಂದಿದ್ದಾರೆ.

ರಾಜಿನಾಮೆಗೆ ನಜೀರ್ ಸಾಬ್ ಆಶಯ

ಧಾರವಾಡ, ಡಿ. 28– ಲೋಕಸಭೆಯ ಧಾರವಾಡ –ದಕ್ಷಿಣ ಮತದಾರ ಕ್ಷೇತ್ರದಲ್ಲಿ ಸೋಲನ್ನಪ್ಪಿದ ಕರ್ನಾಟಕ ಗ್ರಾಮೀಣ ಅಭಿವೃದ್ಧಿ ಸಚಿವ ನಜೀರ್ ಸಾಬ್ ತಾನು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರಿಗೆ ರಾಜಿನಾಮೆ ಸಲ್ಲಿಸುವುದಾಗಿ ಇಲ್ಲಿಂದು ತಿಳಿಸಿದರು.

ಸಚಿವ ಸಂಪುಟದ ಹಿಂದಿನ ಸಂಗಾತಿ ಕಾಂಗ್ರೆಸ್ (ಐ) ಯ ಅಭ್ಯರ್ಥಿ ಅಜೀಜ್ ಸೇಟ್‌ರಿಂದ ತೀರಾ ಹಿಂದಿರುವ ನಜೀರ್ ಸಾಬ್ ತನ್ನ ಸೋಲನ್ನು ಒಪ್ಪಿಕೊಂಡಿರುವರು.

ಕಾಂಗ್ರೆ–ಅಣ್ಣಾಡಿಎಂಕೆ ಕೂಟ ವಿಜಯದತ್ತ

ಮದರಾಸು, ಡಿ. 28 :– ತಮಿಳುನಾಡಿನ 35 ಲೋಕಸಭಾ ಕ್ಷೇತ್ರಗಳಲ್ಲಿ ಮತ್ತು 189 ವಿಧಾನಸಭಾ ಕ್ಷೇತ್ರಗಳಲ್ಲಿ ಅಣ್ಣಾ ಡಿ ಎಂ ಕೆ ಮತ್ತು ಕಾಂಗ್ರೆ ಪಕ್ಷದ ಮೈತ್ರಿಕೂಟವು ಸ್ಪಷ್ಟ ಮುನ್ನಡೆ ಸಾಧಿಸಿ ವಿಜಯದತ್ತ ಮುಂದುವರಿದಿದೆ.

ಮೂರು ಲೋಕಸಭಾ ಕ್ಷೇತ್ರಗಳಲ್ಲಿ ಮತ್ತು 43 ವಿಧಾನಸಭಾ ಕ್ಷೇತ್ರಗಳಲ್ಲಿ ಮಾತ್ರ ಡಿ ಎಂ ಕೆ ನೇತೃತ್ವದ ಪ್ರತಿಪಕ್ಷ ಮುನ್ನಡೆ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

ವಿಧಾನಸಭಾ ಚುನಾವಣೆಯಲ್ಲಿ ಅಣ್ಣಾ ಡಿ ಎಂ ಕೆ 128ರಲ್ಲಿ ಕಾಂಗ್ರೆ 61ರಲ್ಲಿ ಮತ್ತು ಡಿ ಎಂ ಕೆ ಪಕ್ಷವು 25 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ.

ತಮಿಳುನಾಡಿನ ಮುಖ್ಯಮಂತ್ರಿ ಎಂ. ಜಿ ರಾಮಚಂದ್ರನ್ ಅವರ ಆಂಡಿಪಟ್ಟಿ ವಿಧಾನ ಸಭಾ ಕ್ಷೇತ್ರದಲ್ಲಿ 9,000 ಮತಗಳಿಂದ ಮುಂದಿದ್ದಾರೆ.

ಎಣಿಕೆ ಮುಗಿದ 25 ಸಾವಿರ ಮತಗಳಲ್ಲಿ ಎಂ. ಜಿ. ಆರ್ 17,000 ಮತಗಳನ್ನು ಗಳಿಸಿದ್ದರೆ. ಅವರ ಪ್ರತಿಸ್ಪರ್ಧಿ ಡಿ. ಎಂ. ಕೆ ಯ ಪಿ. ಎನ್. ವಲ್ಲರಸು 8,000 ಮತಗಳನ್ನು ಗಳಿಸಿದ್ದಾರೆ.

ಎಂ. ಜಿ. ಆರ್. ಸಂಪುಟದ ಎರಡನೇ ಸ್ಥಾನದ ಮಂತ್ರಿ ನೆಡುಂಚೇಳಿಯನ್ ಅವರು ಅತ್ತೂರು ವಿಧಾನಸಭಾ ಕ್ಷೇತ್ರದಲ್ಲಿ 12,000 ಮತಗಳಿಂದ ಮುಂದಿದ್ದಾರೆ.

ಪ್ರತಿಷ್ಠಿತ ದಕ್ಷಿಣ ಮದರಾಸು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆ ಅಭ್ಯರ್ಥಿ ವೈಜಯಂತಿಮಾಲಾ ಬಾಲಿ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ತಮಿಳ್ನಾಡು ಜನತಾ ಪಕ್ಷದ ಅಧ್ಯಕ್ಷ ಇರಾ ಸೆಳಿಯನ್ ವಿರುದ್ಧ 16,000 ಮತಗಳ ಅಂತರದಿಂದ ಮುಂದಿದ್ದಾರೆ.

ಮೂರನೇ ಒಂದರಷ್ಟು ಮತಗಳ ಎಣಿಕೆ ಮುಗಿದಾಗ ವೈಜಯಂತಿಮಾಲಾ ಅವರು ಅವರು 1.24ಲಕ್ಷ ಮತಗಳನ್ನು ಗಳಿಸಿದ್ದರೆ, ಇರಾ ಸೆಳಿಯನ್ 1.08ಲಕ್ಷ ಮತಗಳನ್ನು ಗಳಿಸಿದ್ದಾರೆ.

ಕೇಂದ್ರ ಮದರಾಸು ಕ್ಷೇತ್ರದಲ್ಲಿ ಹಾಲಿ ಎಂ. ಪಿ. ಡಿ ಎಂ ಕೆ ಯ ಡಾ॥ ಎ. ಕಲಾನಿಧಿ ಅವರು ಅರ್ನೆಸ್ಟ್ ಪೌಲ್ ವಿರುದ್ಧ 7,000 ಮತಗಳಿಂದ ಮುಂದಿದ್ದಾರೆ.

ಪಳನಿ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಯ ಎ. ಸೇನಾಪತಿ ಗೌಂಡರ್ ಅವರು ತಮಿಳುನಾಡು ಕಾಮರಾಜ್ ಕಾಂಗ್ರೆಸ್‌ನ ಎನ್. ಆರ್. ವೇಲು ಸ್ವಾಮಿ ಅವರಿಗಿಂತ ಒಂದು ಲಕ್ಷ ಮತಗಳಿಂದ ಮುಂದಿದ್ದಾರೆ.

ವಿಧಾನಸಭೆಗೆ ಸ್ಪರ್ಧಿಸಿರುವ ಆಳುವ ಅಣ್ಣಾ ಡಿ ಎಂ ಕೆ ಪಕ್ಷದ ಎಲ್ಲಾ 18 ಮಂದಿ ಸಚಿವರೂ ಮುನ್ನಡೆ ಸಾಧಿಸಿದ್ದಾರೆ. ವಿಧಾನ ಸಭಾ ಸ್ಪೀಕರ್ ಕೆ. ರಾಜಾರಾಂ ಅವರು ಪಣಮರತ್ತು ಪಟ್ಟಿ ಕ್ಷೇತ್ರದಲ್ಲಿ ವಿಜಯಗಳಿಸುವತ್ತ ಧಾವಿಸುತ್ತಿದ್ದಾರೆ.

ಮದರಾಸು ನಗರದ ಪಾರ್ಕ್‌ಟೌನ್ ಪುರಸವಾಲ್ಕಂ ಮತ್ತು ಬಂದರು ಪ್ರದೇಶಗಳಲ್ಲಿ ಡಿ ಎಂ ಕೆ ಅಭ್ಯರ್ಥಿಗಳು ಭಾರಿ ಮುನ್ನಡೆ ಹೊಂದಿದ್ದಾರೆ.

ಮಂಡ್ಯದಲ್ಲಿ ಗೆದ್ದ ಜನತಾ ಅಭ್ಯರ್ಥಿ ಶಂಕರೇ ಗೌಡ

ಸುಲೈಮಾನ್ ಸೇಟ್ ವಿಜಯ

ತಿರುವನಂತಪುರ, ಡಿ. 28 – ಇಲ್ಲಿಯ ಮಂಜೇರಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಇಂಡಿಯನ್ ಯೂನಿಯನ್ ಮುಸ್ಲಿಂಲೀಗ್ ಪಕ್ಷದ ಅಭ್ಯರ್ಥಿ ಇಬ್ರಾಹಿಂ ಸುಲೈಮಾನ್ ಸೇಟ್ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿಯಾದ ಸಿ.ಪಿ.ಎಂ. ಪಕ್ಷದ ಇ.ಕೆ. ಇಂಬಿಚ್ಚಿ ಬಾವಾ ಅವರನ್ನು 58,000 ಮತಗಳಿಂದ ಸೋಲಿಸಿ ವಿಜಯಗಳಿಸಿದ್ದಾರೆ.

ಕಾಸರಗೋಡು: ಐ. ರಾಮರೈ ಗೆಲುವು



ತಿರುವನಂತಪುರ, ಡಿ. 28 – ಕಾಸರಗೋಡು ಲೋಕಸಭಾ ಕ್ಷೇತ್ರದಿಂದ ಕಾಂಗ್ರೆ ಅಭ್ಯರ್ಥಿ ಐ. ರಾಮ ರೈ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಸಿ. ಪಿ. ಎಂ. ನ ಇ. ಬಾಲಾನಂದನ್ ಅವರನ್ನು ಹನ್ನೊಂದು ಸಾವಿರ ಮತಗಳಿಂದ ಸೋಲಿಸಿ ಆಯ್ಕೆಯಾಗಿದ್ದಾರೆ.

ಎಚ್. ಎಂ. ಪಟೇಲ್ ಹಿನ್ನಡೆ

ಅಹ್ಮದಾಬಾದ್, ಡಿ. 28– ಜನತಾ ಪಕ್ಷದ ನಾಯಕರಾದ ಮಾಜಿ ಹಣಕಾಸು ಮಂತ್ರಿ ಎಚ್. ಎಂ. ಪಟೇಲ್ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿಯಾದ ಕಾಂಗ್ರೆ ಪಕ್ಷದ ಸುಬರ್‌ಕಾಂತ ಅವರಿಂದ 9,000 ಮತಗಳಿಂದ ಹಿಂದಿದ್ದಾರೆ.

ಬನತ್‌ವಾಲ ವಿಜಯ

ತಿರುವನಂತಪುರ, ಡಿ. 28– ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಪಕ್ಷದ ಜಿ. ಎಂ. ಬನತ್‌ವಾಲ ಅವರು ಸಿಪಿಐ ಪಕ್ಷದ ಕೊಟ್ಟ್ಯಾಡಿ ಗೋವಿಂದ ಕುಟ್ಟಿ ಅವರನ್ನು 88,000 ಮತಗಳಿಂದ ಸೋಲಿಸಿ ಚುನಾಯಿತರಾಗಿದ್ದಾರೆ.

ಟೈಟ್ಲರ್ ಆಯ್ಕೆ

ನವದೆಹಲಿ, ಡಿ. 28–ಕಾಂಗ್ರೆಸ್ (ಐ)ನ ಪ್ರಮುಖ ಅಭ್ಯರ್ಥಿ ಜಗದೀಶ್ ಟೈಟ್ಲರ್ ಅವರು ದೆಹಲಿಯ ಸದರ್ ಲೋಕಸಭಾ ಕ್ಷೇತ್ರದಿಂದ ಗೆಲುವು ಸಾಧಿಸಿದ್ದಾರೆ.

ಅಯ್ಯರ್ ವಿಜಯ



ಬೆಂಗಳೂರು, ಡಿ. 28 – ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆ ವಿರುದ್ಧ ಸೆಣಸಾಡಲು ಕಣಕ್ಕಿಳಿದಿದ್ದ ರಾಜ್ಯ ಸರಕಾರದ ನಾಲ್ವರು ಸಚಿವರಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದ ಜನತಾ ಅಭ್ಯರ್ಥಿ ವಿ. ಎಸ್. ಕೃಷ್ಣ ಅಯ್ಯರ್ ಮಾತ್ರ ಜಯಗಳಿಸಿದ್ದಾರೆ.

ಅವರು ತಮ್ಮ ಸಮೀಪದ ಕಾಂಗ್ರೆ ಸ್ಪರ್ಧಿ ಡಾ॥ ವೆಂಕಟಗಿರಿ ಗೌಡರನ್ನು ಹತ್ತು ಸಹಸ್ರಕ್ಕಿಂತಲೂ ಅಧಿಕ ಮತಗಳಿಂದ ಸೋಲಿಸಿದರು.

ಸೂರ್ಯವಂಶಿ ವಿಜಯ

ಬೆಂಗಳೂರು, ಡಿ. 28– ಬಿದರೆ ಮೀಸಲು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿಯ ರಾಜೇಂದ್ರ ಕುಮಾರ್ ಅವರನ್ನು ಕಾಂಗ್ರೆಯ ನರಸಿಂಹರಾವ್ ಹುಲ್ಲ ಸೂರ್ಯವಂಶಿ ಅವರು 59,487 ಮತಗಳ ಅಂತರದಿಂದ ಸೋಲಿಸಿದ್ದಾರೆ.

ರಾಜಿನಾಮೆ...

(ಒಂದನೇ ಪುಟದಿಂದ)

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ (ಇ) ಸ್ಪಷ್ಟ ವಿಜಯದತ್ತ ಮುನ್ನಡೆಯುತ್ತಿರುವುದರಿಂದ ಎರಡು ವರ್ಷ ದೀರ್ಘದ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿತ್ವದ ಜನತಾ ಸರಕಾರ ರಾಜಿನಾಮೆ ಸಲ್ಲಿಸಬೇಕಾಗಿ ಕರ್ನಾಟಕದ ಇನ್ನೂ ಅನೇಕ ಕಾಂಗ್ರೆಸ್ (ಐ) ನಾಯಕರು ಒತ್ತಾಯಿಸಿರುವರು.

ಲೋಕಸಭಾ ಚುನಾವಣೆಯಲ್ಲಿ ಜನತಾ ಪಕ್ಷದ ಅಲ್ಪ ಸಾಧನೆಯನ್ನು ಗಮನಿಸಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಮತ್ತವರ ಸಚಿವ ಸಂಪುಟ ರಾಜಿನಾಮೆ ಸಲ್ಲಿಸುವಂತೆ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಆರ್. ಗುಂಡೂರಾವ್ ಇಲ್ಲಿಂದು ಒತ್ತಾಯಿಸಿರುವರು.

ಬಣ್ಣ ಬಣ್ಣದ ಪ್ರಚಾರ ನಡೆಸಿದ ಜನತಾ ಪಕ್ಷಕ್ಕೆ ಜನರು ಸರಿಯಾದ ಉತ್ತರ ಕೊಟ್ಟಿದ್ದಾರೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ (ಇ) ಸಮಿತಿಯ ಅಧ್ಯಕ್ಷ ಕೆ. ಎಚ್. ಪಾಟೀಲ್ ಹೇಳಿದ್ದಾರೆ.

75,000 ರೂ. ಗೆಲ್ಲಿರಿ

ಮೊದಲನೆಯ ಬಹುಮಾನ :— ವರ್ಣ ಟಿವಿ ಅಥವಾ ರೂ. 7000 ನಗದು
ಎರಡನೆಯ ಬಹುಮಾನ :— ಅರ್ಧ ಬೆಲೆಯಲ್ಲಿ ತ್ರೀಸ್ಪೀಡ್ ಮಿಕ್ಸರ್‌ಗ್ರೈಂಡರ್
ಮೂರನೆಯ ಬಹುಮಾನ:— ಟೂ-ಇನ್-ಒನ್ ರೇಡಿಯೋ ಅಥವಾ ರೂ. 170 ನಗದು

ನೀವು ಮಾಡಬೇಕಾದದ್ದು ಇಷ್ಟೇ. ಈ ಪಕ್ಕದ ಮಾದರಿ ಅನುಸರಿಸಿ 4ರಿಂದ 12ರ ವರೆಗಿನ ಅಂಕೆಗಳನ್ನು ತುಂಬಿ ಯಾವ ಕಡೆಯಿಂದ ಕೂಡಿದರೂ ಮೊತ್ತ 24 ಬರಬೇಕು.

10	3	8
5	7	9
6	11	4

ಒಂದು ಅಂಕೆಯನ್ನು ಒಂದೇ ಸಲ ಬರೆಯಬೇಕು. ಒಂದು ಕುಟುಂಬದವರು ಒಂದೇ ಪ್ರವೇಶಪತ್ರ ಕಳಿಸಬಹುದು. ಹತ್ತು ದಿನಗಳಲ್ಲಿ ಹಿಂದಿ ಅಥವಾ ಇಂಗ್ಲೀಷ್‌ನಲ್ಲಿ ವಿಳಾಸ ಬರೆದು ಕಳುಹಿಸಿರಿ.

MEC(INDIA)MR 4 P. B. No. 6595, NEW DELHI-110027

ಜಯ ಮತ್ತು ನಂತರ

(ಮುಂಗಾರು ವರದಿ)

ಮಂಗಳೂರು, ಡಿ. 28– ಇ-ಕಾಂಗ್ರೆಸ್ ಅಭ್ಯರ್ಥಿ ಬಿ. ಜನಾರ್ದನ ಪೂಜಾರಿ ಅವರ ಗೆಲುವು ಪಕ್ಷದ ಕಾರ್ಯಕರ್ತರು ಹಾಗೂ ಅಭಿಮಾನಿಗಳಲ್ಲಿ ಹರ್ಷದ ಹೊನಲನ್ನು ಹರಿಸಿತ್ತು.

ಅಪರಾಹ್ನ 4 ಗಂಟೆಯ ವರೆಗೆ ಫಲಿತಾಂಶದ ಬಗ್ಗೆ ಅಧಿಕೃತ ಪ್ರಕಟಣೆ ಇರಲಿಲ್ಲ; ಅದ್ದರಿಂದ ಕರ್ನಾಟಕ ಪಾಲಿಟೆಕ್ನಿಕ್ ಬಳಿ ಜನಸಂದಣಿ ಸೇರಲಿಲ್ಲ; ನಿಷೇಧಾಜ್ಞೆ ಪ್ರಕಾರ ಪೊಲೀಸ್ ಬಂದೋಬಸ್ತು ಕೂಡಾ ಇತ್ತು.

ಬಿ.ಜೆ.ಪಿ. ಕಾರ್ಯಕರ್ತರು ಸಮೀಪದಲ್ಲಿರುವ ಶಾಸಕ ಧನಂಜಯ ಕುಮಾರ್ ಅವರ ಮನೆಯ ಬಳಿ ಸೇರಿದ್ದರೆ, ಕಾಂಗ್ರೆಸ್ ಅಭಿಮಾನಿಗಳು ಸೆಂಟ್ರಲ್ ಹೌಸ್ ಬಳಿ ಸೇರಿದ್ದರು. ಆಯಾ ಅಭ್ಯರ್ಥಿಗಳು ಅನುಕ್ರಮವಾಗಿ ಆ ಸ್ಥಳಗಳಲ್ಲಿದ್ದರು.

ಅಧಿಕೃತ ಪ್ರಕಟನೆ ಆಗುವಿದ್ದರೂ ಮುನ್ನವೇ ಕೇರಿದಂತೆ ಒಂದೆಡೆ ಹರ್ಷ-ಉತ್ಸಾಹ, ಇನ್ನೊಂದೆಡೆ ವಿಷಾದ ವ್ಯಕ್ತವಾಗತೊಡಗಿತು.

ಪೂಜಾರಿಯವರ ಗೆಲುವು ಪ್ರಕಟವಾದಾಗ ಹಲವರಲ್ಲಿ ಮೆರವಣಿಗೆ ಮಾಡುವ ಉತ್ಸಾಹ ಇತ್ತು. ಅವರು ಪಾಲಿಟೆಕ್ನಿಕ್ನಿಂದ ವಿಜಯಮಾಲೆಯೊಂದಿಗೆ ಹೊರಟು ರುತ್ತಲೇ ಹಲವರು ತಮ್ಮ ಮಾಲೆಗಳನ್ನು ಅರ್ಪಿಸಿದರು; ಮುಗಿಲು ಮುಟ್ಟುವಂತೆ ಜಯಘೋಷ ಕೂಗಿದರು.

ನಿಷೇಧಾಜ್ಞೆಯಿಂದಾಗಿ ಮೆರವಣಿಗೆ ಮಾಡುವಂತಿಲ್ಲವಾದ್ದರಿಂದ ತಮ್ಮ ಸಂತೋಷವನ್ನು ವಾಹನಗಳಿಗೆ ಸೀಮಿತಗೊಳಿಸಿದರು. ಚಂಡೆ-ವಾದ್ಯಗಳೊಂದಿಗೆ ಬಾವುಟಗಳನ್ನು ಹಾರಿಸುತ್ತಾ, ಹಲವು ವಾಹನಗಳಲ್ಲಿ ನಗರವಿಡಿ ಸುತ್ತಾಡಿದರು. ಹಲವೆಡೆ ಸಿಡಿಮದ್ದುಗಳನ್ನು ಸುಡುವ ಮೂಲಕ ಹರ್ಷ ಪ್ರಕಟಗೊಂಡಿತು.

ಕೃತಜ್ಞತೆ

ತಮಗೆ ಪ್ರಚಂಡ ಬಹುಮತದ ಜಯ ನೀಡಿದ ಮತದಾರರಿಗೆ ಜನಾರ್ದನ ಪೂಜಾರಿ ಅವರು ಕೃತಜ್ಞತೆ ಸಲ್ಲಿಸಿ, "ಜಯ ನಿಮ್ಮದು" ಎಂದು ಹೇಳಿದ್ದಲ್ಲದೆ ಜನತೆಗೆ ತಮ್ಮ ಸೇವೆಯನ್ನು ಮುಂದುವರಿಸುವುದಾಗಿ ಹೇಳಿದ್ದಾರೆ. ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಿದುದಕ್ಕಾಗಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಸಿಯುಸ್ ಡಿಸೋಜಾ ಅವರು ಕೂಡಾ ಕೃತಜ್ಞತೆ ಸಲ್ಲಿಸಿದ್ದಾರೆ.

ವಿಜಯದ ನಗೆಯೊಂದಿಗೆ ಗೆಲುವಿನ ಅರ್ಹತಾಪತ್ರ ಸ್ವೀಕರಿಸುತ್ತಿರುವ ಆಸ್ಕರ್ ಫೆರ್ನಾಂಡಿಸ್

ಇಂದು ಕಾಂಗ್ರೆಸ್ ವಿಜಯೋತ್ಸವ

ಮಂಗಳೂರು ಡಿ. 28–ದಕ್ಷಿಣಕನ್ನಡ ಜಿಲ್ಲಾ ಕಾಂಗ್ರೆಸ್ (ಐ) ಸಮಿತಿಯು ನಾಳೆ ಅಪರಾಹ್ನ 4 ಗಂಟೆಗೆ ಕಂಕನಾಡಿ ಮೈದಾನದಿಂದ ಚುನಾವಣಾ ವಿಜಯೋತ್ಸವದ ಮೆರವಣಿಗೆ ಏರ್ಪಡಿಸಿದೆ. ಈ ಮೆರವಣಿಗೆ ನಗರದ ಮುಖ್ಯರಸ್ತೆಗಳನ್ನು ಹಾದು ನೆಹರೂ ಮೈದಾನದಲ್ಲಿ ಸಾರ್ವಜನಿಕ ಸಭೆ ಸೇರುವುದು.

ಬೆಳಗ್ಗೆ 11 ಗಂಟೆಗೆ ಕುದ್ರೋಳಿಯಲ್ಲಿರುವ ಗೋಕರ್ಣನಾಥ ದೇವಾಲಯದ ಸಭಾಂಗಣದಲ್ಲಿ ಕೇಂದ್ರದ ಹಣಕಾಸಿನ ಉಪಮಂತ್ರಿ ಬಿ. ಜನಾರ್ದನ ಪೂಜಾರಿಯವರ ಚುನಾವಣಾ ವಿಜಯಕ್ಕೆ ಅಭಿನಂದನೆ ಸಲ್ಲಿಸಲು ಅಭಿಮಾನಿಗಳ ಸಭೆ ನಡೆಯಲಿದೆ.

ಪೂಜಾರಿಯವರ ಬಿಡುವಿಲ್ಲದ ಕಾರ್ಯಕ್ರಮ

ಮಂಗಳೂರು, ಡಿ. 28–ಗೆದ್ದು ಇಲ್ಲಿನ ಅಭಿಮಾನಿಗಳ ಅಭಿನಂದನೆ ಸ್ವೀಕರಿಸಿದ ಜನಾರ್ದನ ಪೂಜಾರಿ ಅವರು ನೇರವಾಗಿ ಉಳ್ಳಾಲಕ್ಕೆ ತೆರಳಿದರು.

ತಮಗೆ ಅತಿ ಹೆಚ್ಚಿನ ಮುನ್ನಡೆ ನೀಡಿದ ಉಳ್ಳಾಲದ ಮತದಾರರನ್ನು ಅಭಿನಂದಿಸುವುದು ಅವರ ಉದ್ದೇಶವಾಗಿತ್ತು.

ಅಲ್ಲಿ ಬಿ.ಜೆ.ಪಿ. ಅಭ್ಯರ್ಥಿಗೆ 14,617 ಮತ ಬಂದರೆ ಇವರಿಗೆ 39,902 ಲಭಿಸಿದೆ.) ಹಾಗೆಯೇ ಅಲ್ಲಿನ ಪ್ರಸಿದ್ಧ ದರ್ಗಾಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು.

ನಂತರ ನಗರಕ್ಕೆ ಮರಳಿ ಪೂಜಾರಿ ಅವರು ಗೋಕರ್ಣನಾಥ, ವೆಂಕಟರಮಣ, ಶರವು ಗಣಪತಿ ದೇವಾಲಯಗಳಿಗೆ ಹಾಗೂ ಮಿಲಾಗ್ರಿಸ್ ಇಗರ್ಜಿಗೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು.

ಮೆರವಣಿಗೆ, ಸಭೆ

ನಾಳೆ (ತಾ. 29) ಬೆಳಗ್ಗೆ 11 ಗಂಟೆಗೆ ಕುದ್ರೋಳಿಯ ಕೊರಗಪ್ಪ ಸ್ಮಾರಕ ಸಭಾಂಗಣದಲ್ಲಿ ಪೂಜಾರಿ ಅವರು ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುವರು.

ಇಲ್ಲಿ ಜನತಾ ಇಲ್ಲ ಆದ್ದರಿಂದ ಮತ ಇಲ್ಲ

ಮಂಗಳೂರು, ಡಿ. 28– ನ್ಯಾಯಾಲಯದಲ್ಲಿ ವಕೀಲರ ಪಾಟೀಸವಾಲಿಗೆ 'ಹೌದು ಅಥವಾ ಇಲ್ಲ' ಎಂದು ಉತ್ತರಿಸಬೇಕು. ಬೇರೆ ವಿವರಣೆಗೆ ಅವಕಾಶವಿಲ್ಲ. ಚುನಾವಣೆಯಲ್ಲಿ ಕೂಡಾ ಹಾಗೆಯೇ ಯಾವನಾದರೂ ಒಬ್ಬ ಅಭ್ಯರ್ಥಿಗೆ ಮುದ್ರೆ ಒತ್ತಿ ಹೊರ ಬರಬೇಕು. ತಪ್ಪಿದರೆ ಅಮೂಲ್ಯವಾದ ಮತ ಹಾಳಾಗುತ್ತದೆ.

ಆದರೆ ಮತ ಹಾಳಾಗುತ್ತದೆನ್ನುವ ಚಿಂತೆಯಿಲ್ಲದೆ ಹಲವರು ತಮ್ಮದೇ ರೀತಿಯಲ್ಲಿ ಪ್ರತಿಭಟನೆ ತೋರಿದ್ದಾರೆ. ಅದೆಂದರೆ ಚೀಟಿ ಬರೆದು ಮತಪೆಟ್ಟಿಗೆಗೆ ಹಾಕಿದ್ದು. ಮಂಗಳೂರು ವಿಧಾನಸಭಾ ಕ್ಷೇತ್ರದಲ್ಲಿ ಅಂಥ ಮೂರು ಚೀಟಿಗಳು ಸಿಕ್ಕಿವೆ.

ಒಬ್ಬ ಚೀಟಿದಾರ ಇಲ್ಲಿ ಜನತಾ (ಅಭ್ಯರ್ಥಿ) ಇಲ್ಲದುದಕ್ಕೆ ವಿಷಾದಿಸಿ ಬರೆದ: ಮತವನ್ನೇ ಚಲಾಯಿಸಲ್ಲ. ಆತ ಒಕ್ಕಣೆ ಹೀಗಿದೆ – "ಮುಂದಿನ ಪ್ರಧಾನಿ ರಾಮಕೃಷ್ಣ ಹೆಗ್ಡೆ. ಇಲ್ಲಿ ಜನತಾ ಇಲ್ಲ. ದೇವರು ಒಳ್ಳೆದು ಮಾಡಲಿ"

ಇನ್ನೊಬ್ಬ ಮತದಾರ ಕಾಂಗ್ರೆಸ್ ಅಭ್ಯರ್ಥಿ ಪೂಜಾರಿ ಅವರನ್ನು ಜಾತಿವಾದಿ ಎಂದು ಆಪಾದಿಸಿ, ಕಾಲಮೇಳ ಅವರ ಸೋಲಿಗೆ ಕಾರಣ ಆಗಲಿದೆ ಎಂದು ಭವಿಷ್ಯ ನುಡಿದಿದ್ದಾನೆ. (67)

ಮತ್ತೊಂದು ಚೀಟಿ 37 ವರ್ಷದ ಸ್ವಾತಂತ್ರ್ಯದ ಸಾಧನೆಗಳು–ಎಂದು ಒಂಬತ್ತು ಅಂಶಗಳನ್ನು ಪಟ್ಟಿಮಾಡಿದೆ "ಅದರಲ್ಲಿ ಒಂದು ಹೀಗಿದೆ–ಈ ದೇಶದಲ್ಲಿ ಶ್ರೀಮಂತರು ಕಾನೂನುಗಳನ್ನು ಆಳುತ್ತಾರೆ. ಕಾನೂನುಗಳು ಬಡವರನ್ನು ಆಳುತ್ತವೆ"

ಮಂಗಳೂರು: ಮತಗಳ ವಿವರ

ಮಂಗಳೂರು, ಡಿ. 28–ಮಂಗಳೂರು ಲೋಕಸಭಾ ಕ್ಷೇತ್ರದ ವಿಧಾನಸಭಾ ಕ್ಷೇತ್ರವಾರು ವಿವಿಧ ಅಭ್ಯರ್ಥಿಗಳು ಗಳಿಸಿದ ಮತಗಳು ಹೀಗಿವೆ:

ಕ್ಷೇತ್ರ	ಬಿದ್ದ ಮತಗಳು	ತಿರಸ್ಕೃತ ಮತಗಳು	ಸಿಂಧುವಾದ ಮತಗಳು	ಕಾಂಗ್ರೆಸ್ಗೆ ಬಿದ್ದ ಮತಗಳು	ಬಿಜೆಪಿಗೆ ಬಿದ್ದ ಮತಗಳು	ಏಕನಾಥ ನಾಯಕ್‌ಗೆ ಬಿದ್ದ ಮತ
ಮಂಗಳೂರು	53,494	300	53,194	31,271	21,709	214
ಉಳ್ಳಾಲ	55,618	697	54,921	39,902	14,617	402
ವಿಟ್ಲ	66,492	691	65,801	41,769	23,632	400
ಪುತ್ತೂರು	71,633	794	70,839	43,194	27,222	423
ಸುಳ್ಯ	66,462	852	65,610	39,165	25,897	548
ಮಡಿಕೇರಿ	56,796	829	55,967	33,132	22,558	[illegible]
ಸೋಮವಾರಪೇಟೆ	67,617	1141	66,476	38,634	27,291	551
ವೀರಾಜಪೇಟೆ	50,554	1089	49,465	32,094	16,999	372

ಸಿಕಂದರ್ ಬಖ್ತ್ ಪರಾಭವ



ನವದೆಹಲಿ, ಡಿ. 28–ನವದೆಹಲಿಯ ಚಾಂದ್ನಿ ಚೌಕ್ ಕ್ಷೇತ್ರದಲ್ಲಿ ಬಿ.ಜೆ.ಪಿ. ಅಭ್ಯರ್ಥಿ ಸಿಕಂದರ್ ಬಖ್ತ್ ಅವರು ತಮ್ಮ ನಿಕಟ ಪ್ರತಿಸ್ಪರ್ಧಿ ಕಾಂಗ್ರೆಸ್ಸಿನ ಜೈ ಪ್ರಕಾಶ್ ಅಗರ್‌ವಾಲ್ ಅವರೆದುರು 31 ಸಾವಿರ ಮತಗಳ ಅಂತರದಿಂದ ಸೋತುಹೋದರು.

ಅಜೀಜ್ ಸೇಟ್ ಗೆಲುವು



ಬೆಂಗಳೂರು, ಡಿ. 28– ಕಾಂಗ್ರೆಸ್ (ಐ)ನ ಅಜೀಜ್‌ಸೇಟ್ ಅವರು ಧಾರವಾಡ ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ. ಅವರು ತಮ್ಮ ಪ್ರತಿಸ್ಪರ್ಧಿ ಜನತಾದ ಗ್ರಾಮೀಣ ಸಚಿವ ಅಬ್ದುಲ್ ನಜೀರ್ ಸಾಬ್ ಅವರನ್ನು 57,000 ಮತಗಳ ಅಂತರದಿಂದ ಸೋಲಿಸಿದರು.

ಗಲಭೆ ನಿರತ ಕಾಂಗ್ರೆಸ್ ಗುಂಪಿಗೆ ಅಶ್ರುವಾಯು

ಬೆಂಗಳೂರು, ಡಿ. 28– ಚಿಕ್ಕೋಡಿಯಲ್ಲಿ ಕಾಂಗ್ರೆಸ್ (ಐ) ಬೆಂಬಲಿಗರೆಂದು ಹೇಳಲಾದವರ ಅಕ್ರಮ ಗುಂಪೊಂದನ್ನು ಚದುರಿಸಲು ಪೊಲೀಸರು ಲಾಠಿಪ್ರಯೋಗ ಮತ್ತು ಅಶ್ರುವಾಯು ಸಿಡಿಸಿದರು.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಕೇಂದ್ರ ಸಚಿವ ಬಿ. ಶಂಕರಾನಂದರು ಮತಗಳ ವಿಶಾಲ ಅಂತರದಿಂದ ಹಿಂದೆ ಬಿದ್ದಿರುವ ಸುದ್ದಿಯನ್ನು ಆಕಾಶವಾಣಿಯ ಮೂಲಕ ತಿಳಿದಾಗ ಜನರು ಹಿಂಸಾಚರಣೆಗಳಲ್ಲಿ ತೊಡಗಿದ್ದರೆನ್ನಲಾಗಿದೆ.

ತೆಲುಗು ದೇಶಂ ಮುನ್ನಡೆ

ಹೈದರಾಬಾದ್, ಡಿ. 28- ದೇಶಾದ್ಯಂತ ಬೀಸುತ್ತಿರುವ ಇಂದಿರಾ ಅನುಕಂಪದ ಗಾಳಿಗೆ ಆಂಧ್ರಪ್ರದೇಶದಲ್ಲಿ ಸಮರ್ಥ ತಡೆಯೊಡ್ಡಿರುವ ತೆಲುಗುದೇಶಂ ಪಕ್ಷ ಫಲಿತಾಂಶ ಘೋಷಣೆಯಾಗಿರುವ 13 ಕ್ಷೇತ್ರಗಳಲ್ಲಿ 10 ಸ್ಥಾನಗಳನ್ನು ಗೆದ್ದುಕೊಂಡಿದೆ.

ರಾಜ್ಯದಲ್ಲಿ ಈಗಲೂ ಜನಪ್ರಿಯತೆಯನ್ನು ಉಳಿಸಿಕೊಂಡಿರುವ ತೆಲುಗುದೇಶಂ ಎಲ್ಲಾ ಕ್ಷೇತ್ರಗಳಲ್ಲೂ ಮುನ್ನಡೆ ಸಾಧಿಸಿ ವಿಜಯ ಗಳಿಸುವ ಸ್ಪಷ್ಟ ಸೂಚನೆಗಳಿವೆಯೆಂದು ಇತ್ತೀಚಿನ ವರದಿಗಳು ತಿಳಿಸಿವೆ.

ಕಾಂಗ್ರೆಸ್‌ನ ಭದ್ರ ಕೋಟೆಗಳಿಗೂ ಲಗ್ಗೆ ಹಾಕಿರುವ ತೆಲುಗುದೇಶಂ ನೇತೃತ್ವದ ಪ್ರತಿಪಕ್ಷಗಳು ಕೇಂದ್ರ ಮಂತ್ರಿಗಳಾದ ಪಿ.ವಿ. ನರಸಿಂಹರಾವ್ (ಹನುಮಕೊಂಡ) ವಿಜಯ ಭಾಸ್ಕರ ರೆಡ್ಡಿ (ಕರ್ನೂಲು) ಮತ್ತು ಶಿವಶಂಕರ್ (ಮೇದಕ್) ಅವರನ್ನು ಸೋಲಿಸಿದೆ.

ಕೇಂದ್ರ ಮಂತ್ರಿಗಳಾಗಿರುವ ಪಿ. ವೆಂಕಟಸುಬ್ಬಯ್ಯ, ಮಲ್ಲಿಕಾರ್ಜುನ, ಎಂ.ಎಸ್. ಸಂಜೀವಿನಿ ರಾವ್ ಅವರೂ ತೆಲುಗುದೇಶಂ ಗಾಳಿಗೆ ತತ್ತರಿಸಿ ಹಿನ್ನಡೆ ಸಾಧಿಸಿರುವ ವರದಿಗಳು ಬರುತ್ತಿವೆ.

ರಾಮುಲು ಆಯ್ಕೆ

ಬೆಂಗಳೂರು, ಡಿ. 28–ಕೊಪ್ಪಳ ಕ್ಷೇತ್ರದಲ್ಲಿ ಕಾಂಗ್ರೆಸ್ (ಐ) ಅಭ್ಯರ್ಥಿ ಹೆಚ್.ಜಿ. ರಾಮುಲು ಅವರು ಬಿಜೆಪಿಯ ಜಿ. ಎಸ್. ಪಾಟೀಲ್ ಅವರನ್ನು 43,000 ಮತಗಳ ಅಂತರದಿಂದ ಸೋಲಿಸಿ ಆಯ್ಕೆಗೊಂಡಿದ್ದಾರೆ.

ಕೆ. ಹೆಚ್. ರಂಗನಾಥ್ ಆಯ್ಕೆ



ಬೆಂಗಳೂರು, ಡಿ. 28- ಚಿತ್ರದುರ್ಗ ಕ್ಷೇತ್ರದಿಂದ ಕಾಂಗ್ರೆಸ್(ಐ) ಅಭ್ಯರ್ಥಿ ಕೆ. ಹೆಚ್. ರಂಗನಾಥ್ 57,000 ಮತಗಳ ಅಂತರದಿಂದ ಆಯ್ಕೆಯಾಗಿದ್ದಾರೆ.

ಜನತಾ ಪಕ್ಷದ ಅಭ್ಯರ್ಥಿ ರಾಜ್ಯದ ಕೃಷಿ ಮಂತ್ರಿ ಬಿ. ಎಲ್. ಗೌಡ ಅವರ ಸಮೀಪದ ಪ್ರತಿಸ್ಪರ್ಧಿ ಆಗಿದ್ದರು.

ಉಡುಪಿಯಲ್ಲಿ ವಿಜಯೋತ್ಸವ

(ಮುಂಗಾರು ವರದಿ)

ಉಡುಪಿ, ಡಿ. 28– ಎಂಟನೇ ಲೋಕಸಭಾ ಚುನಾವಣೆಯಲ್ಲಿ ತಮ್ಮ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಕೆ. ಎಸ್. ಹೆಗ್ಡೆ ಅವರನ್ನು ಪರಾಭವಗೊಳಿಸಿದ ಕಾಂಗ್ರೆಸ್ ಅಭ್ಯರ್ಥಿ ಆಸ್ಕರ್ ಫೆರ್ನಾಂಡಿಸ್ ಅವರಿಗೆ ಉಡುಪಿ ನಾಗರಿಕರು ಇಂದು ರಾತ್ರಿ ಹೃದಯಸ್ಪರ್ಶಿ ಅಭಿನಂದನೆ ನೀಡಿದರು.

ಝಗಝಗಿಸುವ ವಿದ್ಯುತ್ ದೀಪಗಳ ಬೆಳಕಲ್ಲಿ ಉತ್ಸಾಹದ ಹೊನಲು ಚಿಮ್ಮಿಸಿ ಚರ್ಮವಾದ್ಯಗಳ ಹಿಮ್ಮೇಳಕ್ಕೆ ಕುಣಿದು ಕುಪ್ಪಳಿಸುತ್ತಿದ್ದ ಯುವಕರ ಸಮೂಹ ಉಡುಪಿಯಲ್ಲಿ ಸಂಭ್ರಮ ಆಚರಿಸಿತು.

ಪೊಲೀಸರ ಹದ್ದಿನ ಕಾವಲು ಯುವ ಸಮೂಹವನ್ನು ಹದ್ದುಬಸ್ತಿನಲ್ಲಿಡುವಲ್ಲಿ ಯಶಸ್ವಿಯಾಯಿತು.

ಇಂದು ಬೆಳಗ್ಗೆ 11 ಗಂಟೆ ಹೊತ್ತಿಗೆ ಆಸ್ಕರ್ ಫೆರ್ನಾಂಡಿಸ್ ಅವರು 25 ಸಾವಿರಕ್ಕೂ ಅಧಿಕ ಮತಗಳಿಂದ ಮುಂದಿರುವ ಸುದ್ದಿ ಕೇಳಿ ನೂರಾರು ಕಾರ್ಯಕರ್ತರು ಅಲ್ಲಲ್ಲಿ ಗುಂಪು ಸೇರಿ ಪಟಾಕಿ ಸುಡುತ್ತಿದ್ದರು.

ನಗರದ ಪೂರ್ಣಪ್ರಜ್ಞ ಕಾಲೇಜಿನಿಂದ ವಿಜಯೋತ್ಸವ ಮೆರವಣಿಗೆ ಹೊರಟಿತ್ತು.

ಆಸ್ಕರ್ ಫೆರ್ನಾಂಡಿಸ್

ಉಡುಪಿ, ಡಿ. 28–ಕಾಂಗ್ರೆಸ್ ಪಕ್ಷದ ವಿಜಯಿ ಅಭ್ಯರ್ಥಿ ಆಸ್ಕರ್ ಫೆರ್ನಾಂಡಿಸ್ ಅವರು ಇಂದು (29) ಈ ಕೆಳಗಿನ ಸ್ಥಳಗಳಲ್ಲಿ ಜನತೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಬೆಳಗ್ಗೆ 10 ಗಂಟೆಗೆ ಮಂಗಳೂರಿನ ಪಡೀಲ್: 10.30ಕ್ಕೆ ಅರ್ಕುಳ, ಅಡ್ಯಾರ್ 11ಕ್ಕೆ, ಕಣ್ಣೂರ್, 11.30 ಬಿ. ಸಿ. ರೋಡ್, 12.00, ಬಂಟ್ವಾಳ 12.30, ಗುರುಪುರ, ಮಧ್ಯಾಹ್ನ 1ಗಂಟೆಗೆ, ಕೈಕಂಬ 1.30, ಮೂಡಬಿದ್ರಿ, 2.00, ಶಿರೂರು 4, ಬೈಂದೂರ್ 4.30, ಕುಂದಾಪುರ 5.30, ಬ್ರಹ್ಮಾವರ 6.30 ಕಲ್ಯಾಣಪುರ ಸಂತೆಕಟ್ಟೆ, 7.30,

ಭಗತ್‌ಗೆ ಭಾರೀ ಜಯ

ನವದೆಹಲಿ, ಡಿ. 28– ಪೂರ್ವ ದೆಹಲಿ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಿರುವ ಕೇಂದ್ರ ಸಚಿವ ಎಚ್. ಕೆ. ಎಲ್. ಭಗತ್ ಅವರು 3,12,000 ಮತಗಳ ಅಂತರದಿಂದ ಆಯ್ಕೆಯಾಗಿದ್ದಾರೆ.

ಅವರ ವಿರುದ್ಧ ನಿಂತಿರುವ ಎಲ್ಲಾ ಅಭ್ಯರ್ಥಿಗಳೂ ಠೇವಣಿ ಕಳೆದುಕೊಂಡಿದ್ದಾರೆ.

Heartiest Congratulations To our Beloved Deputy Finance Minister

Sri B. Janardhana Poojary

For winning the Mangalore Constituency for The Third Consecutive time with a thumping majority.

B. M. Hassan Haji
Kandak, MANGALORE.

ಮಂಗಳೂರು ಲೋಕಸಭಾ ಕ್ಷೇತ್ರದಿಂದ ಲಕ್ಷಾಂತರ ಮತಗಳ ಅಂತರದಿಂದ ಆಯ್ಕೆಯಾದ ಕಾಂಗ್ರೆಸ್ (ಇ) ಅಭ್ಯರ್ಥಿ ಬಡವರ ಬಂಧು

ಶ್ರೀ ಜನಾರ್ದನ ಪೂಜಾರಿ



ಇವರಿಗೆ ಹಾರ್ದಿಕ ಅಭಿನಂದನೆಗಳು- ನಮ್ಮ ಸಮಾಜದಲ್ಲಿ ಪ್ರತಿಷ್ಠಿತ ವರ್ಗದವರು ಹರಡಿಸಿದ 'ವ್ಯವಸ್ಥಿತ' ಅಪಪ್ರಚಾರವನ್ನು ದಿಟ್ಟತನದಿಂದ ಮೆಟ್ಟಿನಿಂತು, ದೀನದಲಿತರ ಹಾಗೂ ಅಲ್ಪಸಂಖ್ಯಾತರ ಪರವಾಗಿ ತನ್ನ ಯೋಜನೆಯಂತೆ ಕಾರ್ಯ ನಿರ್ವಹಿಸಿ, ಅವರ ಪ್ರೀತಿ, ವಿಶ್ವಾಸ, ಅಭಿಮಾನಗಳಿಗೆ ಪಾತ್ರರಾಗಿ ಮೂರನೇ ಬಾರಿ ಆಯ್ಕೆಗೊಂಡ ಶ್ರೀ ಜನಾರ್ದನ ಪೂಜಾರಿಯವರು ಇನ್ನೂ ಹೆಚ್ಚಿನ ಯಶಸ್ಸನ್ನು ಪಡೆಯಲಿ ಎಂದು ಹಾರೈಸುವ,

ಶ್ರೀ ದೇವಕುಮಾರ್

ಸುಮಂಗಲ ಸ್ವೀಟ್ಸ್ ಎಂಡ್ ಕೇಟರರ್ಸ್

ಕುದ್ರೋಳಿ ಮಂಗಳೂರು. ದೂರವಾಣಿ—22066

ಕೇರಳದಲ್ಲಿ ಎಡರಂಗ ಪ್ರತಿಷ್ಠೆಗೆ ಪೆಟ್ಟು

ತಿರುವನಂತಪುರ, ಡಿ. 28–ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಸಂಯುಕ್ತ ಪ್ರಜಾಸತ್ತಾತ್ಮಕ ರಂಗವು 20ರಲ್ಲಿ 17 ಸ್ಥಾನಗಳನ್ನು ಗೆದ್ದುಕೊಂಡು ಸ್ಪಷ್ಟ ಮುನ್ನಡೆ ಸಾಧಿಸಿದೆ

ಸಂಯುಕ್ತ ರಂಗ ಅಭ್ಯರ್ಥಿಗಳು ವಿಜಯ ಗಳಿಸಿದ 17 ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ 13 ಸ್ಥಾನ ಸಿಕ್ಕಿದರೆ ಮುಸ್ಲಿಂಲೀಗ್ ಮತ್ತು ಕೇರಳ ಕಾಂಗ್ರೆಸ್ (ಜೆ) ತಲಾ ಎರಡು ಸ್ಥಾನಗಳನ್ನು ಪಡೆದಿವೆ.

ಸಿ.ಪಿ.ಎಂ. ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗವು ಮೂರು ಸ್ಥಾನಗಳನ್ನು ಗಳಿಸಿದ್ದು ಸಿಪಿಎಂ, ಕಾಂಗ್ರೆಸ್ (ಎಸ್) ಮತ್ತು ಜನತಾ ಅವುಗಳನ್ನು ಸಮವಾಗಿ ಹಂಚಿಕೊಂಡಿವೆ.

ಕ್ವಿಲಾನ್ ಕ್ಷೇತ್ರದಿಂದ ಸಂಯುಕ್ತ ರಂಗದ ಎಸ್. ಕೃಷ್ಣಕುಮಾರ್ ಗೆದ್ದಿದ್ದರೆ ತಿರುವನಂತಪುರದಿಂದ ಎ. ಚಾರ್ಲ್ಸ್ ಅವರು ಆಯ್ಕೆಯಾಗಿದ್ದಾರೆ.

ಸಿಪಿಎಂ ಪಕ್ಷದ ಎಲ್ಲಾ ಹಾಲಿ ಲೋಕಸಭಾ ಸದಸ್ಯರೂ ಪರಾಜಿತರಾಗಿದ್ದಾರೆ. ಇ.ಕೆ. ಇಂಬಿಚ್ಚಿಬಾವಾ, ಎ.ಕೆ. ಬಾಲನ್, ಇ. ಬಾಲಚಂದ್ರನ್, ಎಂ.ಎಂ. ಲಾರೆನ್ಸ್ ಮತ್ತು ಎಸ್. ಸುಶೀಲಾ ಗೋಪಾಲನ್ ಅವರೇ ಪರಾಜಿತ ಸಿಪಿಎಂ ಎಂ.ಪಿಗಳು.

1969ರಿಂದ ಕೇರಳ ಸರಕಾರದ ನೇತೃತ್ವ ವಹಿಸಿರುವ ಮಾರ್ಕ್ಸಿಸ್ಟರಿಗೆ ಈ ಚುನಾವಣೆಯಲ್ಲಿ ಬಲವಾದ ಹೊಡೆತ ಬಿದ್ದಿದೆ.

ರಾಜ್ಯ ದಮಕಿ ಪಕ್ಷದ ಅಧ್ಯಕ್ಷ ನೀಲ ಲೋಹಿತದಾಸನ್ ನಾದಾರ್ ಅವರು ಪರಾಜಿತರಾಗಿದ್ದಾರೆ. 1980ರಲ್ಲಿ ಕಾಂಗ್ರೆಸ್ ಟಿಕೆಟಿನಲ್ಲಿ ಗೆದ್ದಿದ್ದ ಅವರು ಬಹುಗುಣ ಜತೆ ಸೇರಿ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ್ದರು.

ಎಡರಂಗದ ಜತೆ ಸೇರಿರುವ ಅಖಿಲ ಭಾರತ ಮುಸ್ಲಿಂಲೀಗ್ ಮತ್ತು ಸಮಾಜವಾದಿ ಪ್ರಜಾಸತ್ತಾತ್ಮಕ ಪಕ್ಷಗಳು ಲೋಕಸಭೆಯಲ್ಲಿ ಸ್ಥಾನ ಗಳಿಸಲು ವಿಫಲವಾಗಿದೆ.

ಕೋಟ್ಟಯಂನಿಂದ ಲೋಕಸಭೆಗೆ ಆಯ್ಕೆಯಾಗಿರುವ ವಕ್ಕಂ ಪುರುಷೋತ್ತಮನ್ ತಮ್ಮ ವಿಧಾನಸಭಾ ಸ್ಪೀಕರ್ ಸ್ಥಾನಕ್ಕೆ ಇಂದು ರಾಜೀನಾಮೆ ಸಲ್ಲಿಸಿದರು.

ಸಾವಿರಾರು ಮತಗಳು ತಿರಸ್ಕೃತ

(ಮುಂಗಾರು ವರದಿ)

ಬೆಂಗಳೂರು, ಡಿ. 28– ಬೆಂಗಳೂರು ದಕ್ಷಿಣ ಕ್ಷೇತ್ರದ ಮತಗಳ ಎಣಿಕೆ ಸಮಯದಲ್ಲಿ ಅನೇಕ ಮತಪತ್ರಗಳ ಹಿಂದೆ ಮುದ್ರೆ ಒತ್ತಿದ್ದು ಕಂಡುಬಂದಿತ್ತು.

ಇನ್ನು ಅನೇಕರು ಪ್ರಮುಖ ಪಕ್ಷವೊಂದರ ಚಿಹ್ನೆ ಮೇಲೆ ಮುದ್ರೆ ಒತ್ತಿ ಅದರ ಮೇಲೆ ಹೆಬ್ಬೆಟ್ಟಿನ ಗುರುತು ಮೂಡಿಸಿದ್ದು ಸಹಾ ಗೋಚರಿಸುತ್ತಿತ್ತು.

ಈ ಎಲ್ಲಾ ಮತ ಪತ್ರಗಳು ಸಹ ತಿರಸ್ಕೃತವಾದವುಗಳ ಗುಂಪಿಗೆವರ್ಗೀಕರಣಗೊಂಡಿದ್ದು, ಇಂತಹ ಸಾವಿರಾರು ಮತಪತ್ರಗಳು ಈ ಕ್ಷೇತ್ರದಲ್ಲಿ ಕಂಡುಬಂದವು.

ಸಹಾನುಭೂತಿ ಗೆಲುವು

ಬೆಂಗಳೂರು, ಡಿ. 28– ಲೋಕಸಭಾ ಚುನಾವಣೆಯ ಫಲಿತಾಂಶ ಕೇವಲ ಸಹಾನುಭೂತಿಯ ಬಿರುಗಾಳಿ ಎಂದು ಕರ್ನಾಟಕ ವಿದ್ಯಾ ಸಚಿವ ಎಮ್. ರಘುಪತಿ ಬಣ್ಣಿಸಿದ್ದಾರೆ.

"ಈಗೇನು ಮಾಡಬಹುದು? ಈ ದುರವಸ್ಥೆಯ ನಿವಾರಣೆ ಹೇಗೆ?" ಎಂಬ ತನ್ನ ಪ್ರಶ್ನೆಯನ್ನು ಅವರೇ ಉತ್ತರಿಸಿ ಸಂಸತ್ತಿನ ಭಿನ್ನಮತ ಅಸ್ತಿತ್ವ ಕಳೆದುಕೊಂಡು ಮಾಯವಾಗುವುದೆಂದರು.

ಲೋಕಸಭಾ ಚುನಾವಣೆ-1984 ಕಾಂಗ್ರೆಸ್(ಇ) ಪಕ್ಷದ ವಿಜಯೋತ್ಸವ



ಕೇಂದ್ರ ಸರಕಾರದಲ್ಲಿ ಉಪವಿತ್ತ ಸಚಿವರಾಗಿ ಅಧಿಕಾರ ಸ್ವೀಕರಿಸಿ ಭಾರತದ ಸಮಸ್ತ ಬಡಜನತೆಯ ಹಿತಾಕಾಂಕ್ಷಿಯಾಗಿ ಕಾರ್ಯಪ್ರವೃತ್ತರಾದ ಶ್ರೀ ಜನಾರ್ದನ ಪೂಜಾರಿಯವರು ಭಾರತದಾದ್ಯಂತ ಪ್ರತಿಷ್ಠಿತವರ್ಗದವರ "ವ್ಯವಸ್ಥಿತ ಅಪಪ್ರಚಾರ"ವನ್ನು ಲೆಕ್ಕಿಸದೆ, ದಿಟ್ಟತನದಿಂದ ಕಾರ್ಯವೆಸಗಿ ದೀನದಲಿತರ, ಅಲ್ಪಸಂಖ್ಯಾತರ ಹತ್ತಿರ ಬಂಧುವಾಗಿ ಅವರ ಪ್ರೀತಿ, ವಿಶ್ವಾಸ, ಅಭಿಮಾನಗಳಿಗೆ ಪಾತ್ರರಾಗಿ, ಇದೀಗ ಮೂರನೆ ಬಾರಿ ಲೋಕಸಭೆಗೆ ಲಕ್ಷಾಂತರ ಬಹುಮತಗಳ ಅಂತರದಿಂದ ಆಯ್ಕೆಯಾಗಿರುವುದರಿಂದ ಶ್ರೀ ಜನಾರ್ದನ ಪೂಜಾರಿಯವರನ್ನು ಅಭಿನಂದಿಸಲು ಹಾಗೂ ದೇಶದಾದ್ಯಂತ ಕಾಂಗ್ರೆಸ್(ಇ) ಪಕ್ಷಕ್ಕೆ ದೊರೆತ ಭಾರಿ ಬಹುಮತದ ವಿಜಯೋತ್ಸವವನ್ನು ಈ ದಿನ ಮಂಗಳೂರಲ್ಲಿ ಪಕ್ಷದ ವತಿಯಿಂದ ನಡೆಸಲಾಗುವುದು.

— ವಿಜಯೋತ್ಸವ ಕಾರ್ಯಕ್ರಮ: —

ತಾ. 29-12-84 ಶನಿವಾರ ಬೆಳಗ್ಗೆ 11-00 ಗಂಟೆ–ಕಾರ್ಯಕರ್ತರ ಸಭೆ–ಗೋಕರ್ಣನಾಥ ಹಾಲ್, ಕುದ್ರೋಳಿ-ಮಂಗಳೂರು
ಸಂಜೆ 4-00 ಗಂಟೆ–ಭಾರಿ ಮೆರವಣಿಗೆ–ಕಂಕನಾಡಿ ಮೈದಾನಿನಿಂದ ನೆಹರೂ ಮೈದಾನಿಗೆ
ಸಂಜೆ 5-30 ಗಂಟೆಗೆ–ಸಾರ್ವಜನಿಕ ಸಭೆ–ನೆಹರೂ ಮೈದಾನ್, ಮಂಗಳೂರು

ದೇಶದ ಇತಿಹಾಸದಲ್ಲಿ ಕಾಂಗ್ರೆಸ್(ಇ) ಪಕ್ಷ ನಿರ್ಮಿಸಿದ ಈ ನೂತನ ದಾಖಲೆಯ ಈ ವಿಜಯೋತ್ಸವ ಸಮಾರಂಭಕ್ಕೆ ಕಾಂಗ್ರೆಸ್ ಪಕ್ಷದ ಅಭಿಮಾನಿಗಳು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಪಾಲುಗೊಳ್ಳಬೇಕೆಂದು ವಿನಂತಿಸುವ.

ದ. ಕ. ಜಿಲ್ಲಾ ಕಾಂಗ್ರೆಸ್ (ಇ) ಸಮಿತಿ.

ಕೃಪೆದಾನ: ಎ. ವಿಶ್ವನಾಥ, ವಿಶ್ವಕಿರಣ್, ಮಂಗಳೂರು.

ELTEX A Symbol for Quality Products



ELTEX MOTORS & MONOBLOCS

Motors from 1 HP to 25 HP are manufactured in 2, 4 & 6 pole construstion and upto 180 Frame size. The monoset pumps are manufactured upto 20 HP and the performance confirms to IS: 9079-1978.

Sole Distributors for Karnataka

OMEGA TRADING CORPORATION

Phone: 229170

19 3, Marisamappa lane,
S.J.P. Cross Road,
Bangalore-560002.

ELTEX Make ISI, High speed Monoblock sets, Motors, pumps and WINDEL. Make Submersible sets are approved on KLCARDB. Also Dealers in SHARP Domestic monoblocksets and EXPO MAKE Deepwell Jet pumping sets.

Wanted Dealers in un-represented Areas.

'MUNGARU' Kannada Daily Edited, Printed and Published by V. Raghurama Shetty for Mungaru Prakashana Limited, at 124-B Baikampady Industrial Area, Mangalore-575 011. Phones: 7795 and 28703